# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XVIII - 1 ಫೆಬ್ರವರಿ 2000

### ಈ ಸಂಚಿಕೆಯಲ್ಲಿ


ಅಸೋಸಿಯೇಷನಿಗೆ ಪರಕಾಲ ಮಠದ ಸ್ವಾಮಿಯ ವಿಜಯ 2

ಹಾ.ಮಾ. ನಾಯಕರವರ ಉಪನ್ಯಾಸ ಕಾರ್ಯಕ್ರಮ • ರಮಾ ಕೃಷ್ಣ 4

(ಹರಿ)ದಾಸ ಸಾಹಿತ್ಯ -12 • ರಮಾ ಕೃಷ್ಣ 8

ಸುತ್ತ-ಮುತ್ತ 13



ಸಂಪಾದಕ ಮಂಡಳಿ

ಕೆ. ರಘುನಾಥ್

ಸುಮಾ ದ್ವಾರಕಾನಾಥ್

ಭವಾನಿ ಚಂದ್ರಶೇಖರ್

ರಮಾ ಕೃಷ್ಣಸ್ವಾಮಿ

ರೀಲಾ ಜೋಯಿಸ್

ಕೆ. ಮಂಜುನಾಥಯ್ಯ

ಎಂ.ಎ.ಎನ್. ಪ್ರಸಾದ್




The Mysore Association, Mumbai

393, Bhaudaji Road, Matunga, Mumbai-400 019.

Tel.: 402 46 47 • Grams: "KARUNADU"

# ಅಸೋಸಿಯೇಷನಿಗೆ ಪರಕಾಲ ಮಠದ ಸ್ವಾಮಿಯ ವಿಜಯ

ಜನವರಿ 8ನೇ ತಾರೀಖಿನ ಸಂಜೆ, ಮೈಸೂರಿನಲ್ಲಿರುವ ಶ್ರೀ ಪರಕಾಲ ಮಠದ ಅಧಿಪತಿಗಳಾದ ಶ್ರೀ ಶ್ರೀ ಅಭಿನವಾಗೀಶ ಬ್ರಹ್ಮತಂತ್ರ ಸ್ವತಂತ ಪರಕಾಲ ಸ್ವಾಮಿಗಳು, ಮೈಸೂರು ಅಸೋಸಿಯೇಷನ್ನಿಗೆ ವಿಜಯ್ ಮಾಡಿದರು.



ಮೈಸೂರಿನ ಪರಕಾಲ ಮಠದ ಅಧಿಪತಿಗಳಾದ
ಶ್ರೀ ಶ್ರೀ ಅಭಿನವವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳು.

It is interesting to note that Goddess Saraswati was worshipping this Lord, in Kashmir, when Bhagavan Ramanuja submitted His Sri Bhashyam for Her scrutiny and assessment. Sharada Devi, after a perusal, is said to have certified that this was the best and most faithful Commentary on the Brahma Sutras of Vyasa and gifted the Deity She was worshipping to Ramanuja as a token of Her appreciation of that great commentary.

The same Icon is still being worshipped by the Pontiffs of Parakala Mutt in hoary succession, with all grandeur and pomp, thrice a day. The Wodeyars of Mysore have made very invaluable gifts to the Deity, one of them being a Swing of Diamonds, which is used on rare occasions.

Lord Hayagriva is said to bestow Learning and Wisdom on His Worshippers, as He is considered 'Vidydhidevata' True. But he is also one who can bestow health, wealth and salvation from bondage, as He is Lord Narayana in His earlier of Avataras.

ಶ್ರೀ ಪರಕಾರ ಮಠದ 36ನೇ ಯತೀಂದ್ರರಾದ ಇವರನ್ನು ಅಂದು ಸಂಜೆ 7 ಘಂಟೆ ಪೂರ್ಣಕುಂಭದೊಂದಿಗೆ ಅಸೋಸಿಯೇಷನ್ನಿನ ಪದಾಧಿಕಾರಿಗಳು ಸ್ವಾಗತ ಮಾಡಿದರು. ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿಯವರು ಸ್ವಾಮಿಗಳನ್ನು ಸ್ವಾಗತ ಮಾಡುತ್ತ, ಇಂತಹ ಮಹಾವ್ಯಕ್ತಿ ಅಸೋಸಿಯೇಷನ್ನಿಗೆ ಬರುವುದು ನಮ್ಮೆಲ್ಲರ ಭಾಗ್ಯವೆಂದರು. ಕಾರ್ಯದರ್ಶಿಗಳಾದ ಶ್ರೀ ಪ್ರಸಾದ್ ಅವರು ಸ್ವಾಗತ ಪತ್ರವನ್ನು ಓದಿದರು. ಇದಾದ ನಂತರ 'ಸಿಂಧು ಭೈರವಿ' ತಂಡದವರಿಂದ ಭಕ್ತಿಗೀತೆಗಳ ಕಾರ್ಯಕ್ರಮ ನಡೆಯಿತು. ಸ್ವಾಮಿಗಳು ತಮ್ಮೊಡನೆ ತಂದಿದ್ದ ಶ್ರೀ ಲಕ್ಷ್ಮೀ ಹಯಗ್ರೀವ ದೇವರಿಗೆ ಡೋಲಾಯ ಪೂಜೆಯನ್ನು ನಡೆಸಲಾಯಿತು. ಅದಾದ ನಂತರ ಸ್ವಾಮಿಯವರು ಅನುಗ್ರಹ ಭಾಷಣವನ್ನು ಮಾಡಿದರು. ಪರಕಾಲ ಮಠದ ಆರಾಧ್ಯ ದೇವತೆಯಾದ ಶ್ರೀ ಲಕ್ಷ್ಮೀ ಹಯಗ್ರೀವನ ಬಗ್ಗೆ ಮಾತನಾಡಿದರು. ನಂತರ ಪ್ರಸಾದ ವಿನಿಯೋಗವಾಯಿತು.

ಶ್ರೀ ಪರಕಾಲ ಮಠ ಆರುನೂರು ವರ್ಷಗಳಿಗೂ ಹಿಂದೆ ಸ್ಥಾಪಿತವಾದ ಮಠ. ಇದಕ್ಕೆ ಬಹಳ ಹಿರಿದಾದ ಇತಿಹಾಸವಿದೆ. ಇದನ್ನು 1360ರಲ್ಲಿ ಶ್ರೀ ರಾಮಾನುಜಾಚಾರ್ಯರ ಖ್ಯಾತ ಶಿಷ್ಯರಾದ ಶ್ರೀ ವೇದಾಂತದೇಶಿಕರು ಸ್ಥಾಪಿಸಿದರು. ಮೊದಲಿಗೆ ಕಂಚೀಪುರದ ಹತ್ತಿರದಲ್ಲಿರುವ ತೂಪ್ಪುಲ್ ಎಂಬ ಸ್ಥಳದಲ್ಲಿ ಪರಕಾಲ ಮಠವು ಸ್ಥಾಪಿತವಾಯಿತು. ನಂತರ ಇದನ್ನು ತಿರುಮಲೆಗೆ ಕೊಂಡೊಯ್ಯಲಾಯಿತು. ಹದಿನೇಳನೇಯ ಶತಮಾನದಲ್ಲಿ ಈ ಮಠವನ್ನು ಶ್ರೀರಂಗ ಪಟ್ಟಣಕ್ಕೆ ಕೊಂಡೊಯ್ಯಲಾಯಿತು. ಪರಕಾಲ ಮಠದ ಸ್ವಾಮಿಗಳು ಮೈಸೂರಿನ ಅರಸರಿಗೆ ರಾಜಗುರುಗಳಾದರು. ಟಿಪ್ಪುವಿನ ಪತನದ ನಂತರ ಮಠವನ್ನು ಮೈಸೂರಿಗೆ ಕೊಂಡೊಯ್ಯಲಾಯಿತು. ಅಂದಿನಿಂದ ಪರಕಾಲ ಮಠದ ಮುಖ್ಯ ಕಾರ್ಯಾಲಯವು ಮೈಸೂರಿನಲ್ಲಿದೆ.

ಪರಕಾಲ ಮಠದ ಆರಾಧ್ಯ ದೇವತೆ ಶ್ರೀ ಲಕ್ಷ್ಮೀ ಹಯಗ್ರೀವ. ಈ ಮಠದಲ್ಲಿ ಪ್ರತಿಷ್ಠೆಯಾಗಿರುವ ಶ್ರೀ ಲಕ್ಷ್ಮೀ ಹಯಗ್ರೀವ ವಿಗ್ರಹಕ್ಕೆ ಬಹಳ ಶ್ರೇಷ್ಠವಾದ ಇತಿಹಾಸವಿದೆ. ಶ್ರೀ ರಾಮಾನುಜಾಚಾರ್ಯರಿಗೆ, ಅವರ ಶ್ರೀ ಭಾಷ್ಯವನ್ನು



'ಸಿಂಧು ಭೈರವಿ' ತಂಡದವರಿಂದ ಭಕ್ತಿ ಗೀತೆ ಕಾರ್ಯಕ್ರಮ


The Bhagavata Purana mentions that God as Vishnu, in this Horse faced form is still being worshipped in the Bhadrasva Varsha on the northern side of Himalayas (vide V-18-1). It also gives a rare Hayagriva Manthra and a brief Hymn in praise of this Lord's form. This territory corresponds to Tibet, where the populace, before getting converted to Buddhism, worshipped Loard Hayagriva, and even now continue to do so, without giving up this ancient-mode of worship, whatever their new persuasion may be. A few years ago some dozens of Buddhist Monks from Tibet visited the Parakala Mutt of Mysore to see and believe that their dear Deity was being worshipped here, and the present Pontiff is witness to this rate scene!

ಮೆಚ್ಚಿ, ಸರಸ್ವತಿಯು ತಾನು ಪೂಜಿಸುತ್ತಿದ್ದ ಶ್ರೀ ಲಕ್ಷ್ಮೀ ಹಯಗ್ರೀವ ವಿಗ್ರಹವನ್ನು ಕೊಟ್ಟಳು ಎಂದು ಹೇಳುತ್ತಾರೆ. ಆ ವಿಗ್ರಹವನ್ನು ರಾಮಾನುಜಾಚಾರ್ಯರು ಪ್ರತಿನಿತ್ಯ ಪೂಜೆ ಮಾಡುತ್ತಿದ್ದು, ಅವರ ಕಾಲಾನಂತರ ಅವರ ಶಿಷ್ಯಂದಿರುಗಳು ಪೂಜಿಸುತ್ತಿದ್ದರು. ಈ ರೀತಿ ವೇದಾಂತ ದೇಶಿಕರಿಂದ ಪೂಜಿಸಲ್ಪಡುತ್ತಿದ್ದ ಈ

The episode of Hayagriva is narrated as follows in the Mahabharata, Vishnu Purana and Bhagavata. The Lord created Brahma, taught him the Vedas and entrusted him with the act of creation. At one time when the whole Universe was under deluge, two Asuras – Madhu and Kaitabha by name – pounced upon Brahma and snatched away the Vedas from him. Without the Vedas Brahma became forlorn and could do nothing. He sought refuse at the feet of Lord Vishnu and prayed for help. Vishnu came down as Hayagriva, slew the Asuras and restored the Vedas to Brahma.

ವಿಗ್ರಹವು, ಈ ಮಠದ ಸ್ಥಾಪನೆಯಾದಾಗ, ಅಲ್ಲಿನ ಆರಾಧ್ಯ ದೇವತೆಯಾಯಿತು. ಈ ವಿಗ್ರಹವು ಇಂದಿಗೂ ಈ ಮಠದಲ್ಲಿ ಪೂಜಿಸಲ್ಪಡುತ್ತಿದೆ.

ಮೈಸೂರು ಅರಸರ ಆಶ್ರಯದಲ್ಲಿ ಪರಕಾಲ ಮಠವು ದೊಡ್ಡದಾಗಿ ಬೆಳೆಯಿತು. ಅನೇಕ



ಶ್ರೀ ಲಕ್ಷ್ಮೀ ಹಯಗ್ರೀವ ದೇವರಿಗೆ ಡೋಲಾಯ ಪೂಜೆ ನಡೆಸುತ್ತಿರುವುದು.

ಊರುಗಳಲ್ಲಿ ಅದ ಶಾಖೆಗಳು ಹುಟ್ಟಿಕೊಂಡವು. ಆದರೆ 1947ರಲ್ಲಿ ಭಾರತಕ್ಕೆ ಸ್ವಾತಂತ್ರ ಬಂದ ನತಂರ, ಮಠಕ್ಕೆ ರಾಜಾಶ್ರಯ ತಪ್ಪಿತು. ನಂತರದ ದಿನಗಳಲ್ಲಿ ಜಾರಿಗೆ ಬಂದ 'ಭೂ ಸುಧಾರಣೆ'ಯಲ್ಲಿ ಮಠಕ್ಕೆ ಮತ್ತಷ್ಟು ಧಕ್ಕೆಯಾಯಿತು. ರಾಜಾಶ್ರಯ ಮತ್ತು ಭಕ್ತಾಶ್ರಯವಿಲ್ಲದೆ ಮಠದ ಚುವಟಿಕೆಗಳು ಕಾಂತಿಹೀನವಾದವು.

ಸುದೈವದಿಂದ ಇಂದು ಪರಿಸ್ಥಿತಿ ಬದಲಾಗಿದೆ. ಈಗಿನ ಸ್ವಾಮಿಗಳು ಮಠದ ಏಳಿಗೆಗಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಅವರು ಸಂಸ್ಕೃತ ಮತ್ತು ವೇದಾಧ್ಯಯನಕ್ಕೆ ಸಂಬಂಧ ಪಟ್ಟ ಅನೇಕ ಯೋಜನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ.

ನೂರಾರು ವರ್ಷಗಳ ಇತಿಹಾಸವುಳ್ಳ ಈ ಮಠದ ಏಳಿಗೆಯ ಕಾರ್ಯದಲ್ಲಿ ಭಾಗವಹಿಸಲು ಜನರನ್ನು ಉತ್ತಾಹಿಸಿ, ಒಟ್ಟುಗೂಡಲು ಅವರು ಅನೇಕ ಸ್ಥಳಗಳಿಗೆ ಪ್ರಯಾಣ ಮಾಡುತ್ತಿದ್ದಾರೆ.

ಅಂದಿನ ಸಂಜೆ ಸ್ವಾಮಿಗಳ ದರ್ಶನಕ್ಕೆ ಅನೇಕ ಸದಸ್ಯರು ಮತ್ತು ಅಸೋಸಿಯೇಷನ್ನಿನ ಹಿತೈಷಿಗಳೂ ಬಂದಿದ್ದರು. ಪರಕಾಲ ಮಠದಿಂದ ತಂದಿದ್ದ ಶ್ರೀ ಲಕ್ಷ್ಮೀ ಹಯಗ್ರೀವ ಮೂರ್ತಿಯ ಡೋಲಾಯ ಪೂಜೆಯಲ್ಲಿ ಪಾಲ್ಗೊಂಡರು ಮತ್ತು ಮಠದ ಕಾರ್ಯ ಯೋಜನೆಗಳಿಗೆ ತಮ್ಮ ಕಾಣಿಕೆಯನ್ನಿತ್ತರು. ಒಟ್ಟಿನಲ್ಲಿ ಅಂದಿ ಸಂಜೆ ಸಂತೋಷ ಮತ್ತು ಸಂಭ್ರಮದಿಂದ ಕೂಡಿದ ಸಂಜೆಯಾಗಿತ್ತು.



ನೆರದ ಭಕ್ತಾದಿಗಳು ಮಂಗಳಾರತಿ ಸ್ವೀಕರಿಸುತ್ತಿರುವುದು.

# ಹಾ.ಮಾ. ನಾಯಕರವರ ಉಪನ್ಯಾಸ ಕಾರ್ಯಕ್ರಮ

ರಮಾ ಕೃಷ್ಣ

ಮೈಸೂರು ಅಸೋಸಿಯೇಷನ್ ಮತ್ತು ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಸೇರಿ ನಡೆಸುವ ಎರಡು ದಿನಗಳ ಮೈಸೂರು ಅಸೋಸಿಯೇಷನ್ನಿನ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಕಾರ್ಯಕ್ರಮದ ಅಂಗವಾಗಿ ತಾ. '17-12-99 ಹಾಗೂ 18ರಂದು ಹಾ.ಮಾ. ನಾಯಕ್‌ರವರಿಂದ 'ಬದುಕು - ಬರಹ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಾತಃ ಸ್ಮರಣೀಯರೆನಿಸಿರುವ 'ತಳುಕಿನ ವೆಂಕಣ್ಣಯ್ಯ'ನವರನ್ನು ಕುರಿತು ಉಪನ್ಯಾಸ ನಡೆಯಿತು.

ಮೈಸೂರು ಅಸೋಸಿಯೇಷನ್ನಿನಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿಯವರು ಅತಿಥಿಗಳನ್ನು ಸ್ವಾಗತಿಸಿದರು. ಸ್ವಾಗತ ಭಾಷಣ ಮಾಡುತ್ತಾ ನಮ್ಮ ಅಸೋಸಿಯೇಷನ್ನಿಗೆ ಹೆಸರಾಂತ ಸಾಹಿತಿಗಳು ವಿದ್ವಾಂಸರು, ನಾಟಕಕಾರರು ಮುಂತಾದ ಅನೇಕ ದಿಗ್ಗಜರು ಬಂದು ಉಪನ್ಯಾಸ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ. ಇದು ನಮ್ಮ ಅಸೋಸಿಯೇಷನ್ನಿಗೆ ಒಂದು ಹೆಮ್ಮೆಯ ವಿಷಯವಾಗಿದೆ. ಈ ದಿನ ಕನ್ನಡದ ಹಿರಿಯ ಸಾಹಿತಿಗಳೂ, ವಿದ್ವಾಂಸರೂ, ವಿಮರ್ಶಕರೂ ಆದ ಹಾಗೂ ಗುಲ್ಬರ್ಗಾದ ವಿಶ್ವವಿದ್ಯಾಲಯದಲ್ಲಿ ಉಪಕುಲಪತಿಗಳಾಗಿ ಕೆಲಸಮಾಡಿರುವ ಶ್ರೀ ಹಾ.ಮ. ನಾಯಕ್ ಅವರನ್ನು ಸ್ವಾಗತಿಸುತ್ತೇನೆ. ಇದು ನನಗೊಂದು ಹೆಮ್ಮೆಯ ವಿಷಯವಾಗಿದೆ. ನನ್ನ ವಿದ್ಯಾರ್ಥಿ ಜೀವನದ ಒಂದು ಘಟನೆ ನನಗೀಗ ಜ್ಞಾಪಕಕ್ಕೆ ಬರುತ್ತಿದೆ. ತುಮಕೂರಿನಲ್ಲಿ ಅಂತರ್‌ಕಾಲೇಜು ಭಾಷಣ ಸ್ಪರ್ಧೆಯಲ್ಲಿ ಒಮ್ಮೆ ನಾನೂ ಭಾಗವಹಿಸಿದ್ದೆ. ಆಗ ವಿದ್ಯಾರ್ಥಿಗಳಾಗಿದ್ದ ಹಾ.ಮ.ನಾರವರೂ ಭಾಗವಹಿಸಿದ್ದರು. ಹಾ.ಮ.ನಾ.ರವರಿಗೆ ಪ್ರಥಮ ಬಹುಮಾನ ಬಂತು. ನನಗೇನೂ ಬರಲಿಲ್ಲ. ಅವರು ವಿದ್ಯಾರ್ಥಿಯಾಗಿದ್ದಾಗಿನಿಂದಲೇ ಪ್ರತಿಭಾವಂತರಾಗಿದ್ದವರು. ನನ್ನ ದೊಡ್ಡಪ್ಪನವರಾದ ಡಿ.ವಿ.ಜಿ.ಯವರ ಸಾಹಿತ್ಯಗಳಿಗೆ ಟಿಪ್ಪಣಿಗಳನ್ನು ಬರೆದಿದ್ದಾರೆ. ನನ್ನ ಸೋದರರಾದ B.G.L. ಸ್ವಾಮಿಯವರ ಮೈಸೂರು ಡೈರಿಗೆ ಮುನ್ನುಡಿ ಬರೆದಿದ್ದಾರೆ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯಲ್ಲಿ ದುಡಿದಿದ್ದಾರೆ. ಹೋದ ವರ್ಷವೇ ಬರಬೇಕಾಗಿದ್ದರು. ಅನಿವಾರ್ಯ ಕಾರಣದಿಂದ ಬರಲಿಲ್ಲ. ಈ ವರ್ಷ ಒಪ್ಪಿ ಬಂದದ್ದು ನಮ್ಮ ಅಹೋಭಾಗ್ಯವೆಂದು ಹೇಳಿದರು.

ಅತಿಥಿಗಳನ್ನು ಸಭೆಗೆ ಪರಿಚಯಿಸಿದವರು ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಪ್ರಾಧ್ಯಾಪಕರಾಗಿರುವ ಶ್ರೀ ವಸಂತಕುಮಾರ ತಾಳ್ತಜೆಯವರು. ಇವರು ಮಾತನಾಡುತ್ತಾ ಮೈಸೂರು ಅಸೋಸಿಯೇಷನ್ನು ತನ್ನ ಬಂಗಾರ ಹಬ್ಬದ ಸನ್ನಿವೇಶದಲ್ಲಿ ಸ್ಥಾಪಿಸಿದ ದತ್ತಿ ನಿಧಿಯ ಸಹಕಾರ ಮುಂಬೈ ವಿಶ್ವವಿದ್ಯಾನಿಲಯಕ್ಕೆ ಸತತವಾಗಿ ದೊರೆಯುತ್ತಿದೆ. ಅಂತೆಯೇ ಈ ದತ್ತಿಉಪನ್ಯಾಸ ಕಾರ್ಯಕ್ರಮ ಅವ್ಯಾಹತವಾಗಿ ನಡೆದುಬಂದಿದೆ. ಮೊಟ್ಟಮೊದಲು ದತ್ತಿನಿಧಿಯನ್ನು ಮುಂಬೈನಲ್ಲಿ ಶ್ರೀ ಚಿದಂಬರ ದೀಕ್ಷಿತರ ಪ್ರಯತ್ನದಿಂದ ಮೈಸೂರು ಅಸೋಸಿಯೇಷನ್ನು ಸ್ಥಾಪಿಸಿತು. ಇಂದು ಮುಂಬೈನಲ್ಲಿ 5 ದತ್ತಿ ನಿಧಿಗಳು ಸ್ಥಾಪಿತವಾಗಿದೆ. ಈ ವೇದಿಕೆಯಲ್ಲಿ ಕನ್ನಡದ ಹೆಸರಾಂತ ಸಾಹಿತಿಗಳನ್ನು ಬರಮಾಡಿಕೊಂಡಿದ್ದೇವೆ. ರಂ. ಶ್ರೀ ಮುಗಳಿ, ಶ್ರೀ ಬೇಂದ್ರೆ, ಶ್ರೀ ಶಿವರಾಮಕಾರಂತ, ಡಾ. ಶಿವರುದ್ರಪ್ಪ ಮುಂತಾದವರನ್ನು ಈ ವೇದಿಕೆ ಬರಮಾಡಿಕೊಂಡಿದೆ. ಇಂದು ಹಾ.ಮ.ನಾ. ರಂತಹ ಕನ್ನಡದ ಹಿರಿಯ ಸಾಹಿತಿಗಳನ್ನು ಬರಮಾಡಿಕೊಂಡಿದ್ದೇವೆ. ಇಂದು ಕನ್ನಡ ಪ್ರಾತಃಸ್ಮರಣೀಯರಾದ ಶ್ರೀ ತಳುಕಿನ ವೆಂಕಣ್ಣನವರ ಬಗ್ಗೆ 'ಬದುಕು - ಬರಹ' ಎಂಬ ಶೀರ್ಷಿಕೆಯ ಮೇಲೆ 2 ದಿನ ಮಾತನಾಡುತ್ತಿದ್ದಾರೆ. ಎ. ಆರ್. ಕೃಷ್ಣಶಾಸ್ತ್ರಿಗಳು ಹಾಗೂ ವೆಂಕಣ್ಣಯ್ಯನವರು 'ಅಶ್ವಿನಿದೇವತೆಗಳು' ಎಂದು ಗುರುತಿಸಲ್ಪಟ್ಟಿರುವವರು. ಟಿ. ಎಸ್. ವೆಂಕಣ್ಣಯ್ಯ ಬಹಳ ಎತ್ತರದ ಮನುಷ್ಯರು ಅವರು ವೀಸೀ ಯವರ ಮನೆಗೆ ಬಂದಾಗ. ಬಹಳ ಕುಳ್ಳಗಿದ್ದ ಬಾಗಿಲನ್ನು ದಾಟಲು ಬಹಳ ತಲೆತಗ್ಗಿಸಬೇಕಿತ್ತಂತೆ. ವೀ.ಸೀ.ಯವರಿಗೆ ಇಂತಹ ಭವ್ಯ ವ್ಯಕ್ತಿತ್ವದ ವ್ಯಕ್ತಿ ತಲೆ ತಗ್ಗಿಸಿ ಬರುವುದು ಸರಿಬೀಳದೆ ತಮ್ಮ ಮನೆಯ ಬಾಗಿಲನೇ ಬದಲಾಯಿಸಿ ಎತ್ತರದ ಬಾಗಿಲು ಮಾಡಿಸಿದರಂತೆ. ಇಂತಹ ವ್ಯಕ್ತಿಯನ್ನು ಕುರಿತು ಮಾತನಾಡಲಿದ್ದಾರೆ ಹಾ.ಮ.ನಾರವರು. ಹಾ.ಮಾ.ನ. ಮುಂಬೈ ಕನ್ನಡ ವಿಭಾಗಕ್ಕೆ ಶ್ರೀ ರಕ್ಷೆಯಂತಿದ್ದಾರೆ. ವಿಮರ್ಶಕರೂ, ಲೇಖಕರೂ, ಅಂಕಣ ಬರಹಗಾರರು ತಮ್ಮ ಅಂಕಣ ಬರಹದ ಮೂಲಕ ಭಾರತೀಯ ಕ್ಷೇತ್ರದಲ್ಲಿ ಏನಾಗುತ್ತಿದೆ, ಏನಾಗಿದೆ ಎಂಬುದನ್ನು ತಿಳಿಸುವವರು ಹಾಗೂ ಅಂಕಣದ ಸಾರ್ವಭೌಮ ರೆನಿಸಿರುವವರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ B.A. ಪದವೀಧರರಾಗಿ, ಕಲ್ಕತ್ತಾದ ವಿಶ್ವವಿದ್ಯಾನಿಲಯದಿಂದ M.A. ಮಾಡಿ ಅಮೆರಿಕೆಯ ಇಂಡಿಯಾನಾ ರಾಜ್ಯದ Ph.D ಪದವಿ ಪಡೆದು ವಿಶ್ವದ ಯಾವ ಭಾಗವೂ ಯಾವ ದೇಶವೂ ತಮಗೆ ಹೊರತಲ್ಲಾ ಎಂದು ತೋರಿಸಿಕೊಟ್ಟಿರುವವರು. ಎಂದು ಹಾ.ಮ.ನಾ.ರವರ ವ್ಯಕ್ತಿಪರಿಚಯ ಮಾಡಿಕೊಟ್ಟರು.

'ಬದುಕು - ಬರಹ' ದ ಬಗ್ಗೆ ಹಾ.ಮ.ನಾ.ರವರು ಮಾತನಾಡುತ್ತಾ ಕಳೆದ ವರ್ಷದತೊಂದರೆಗಳು ಈಗಲೂ ಇದೆ. ಮುಂಬೈನ ನನ್ನ ಅಭಿಮಾನಿಗಳು ಕಳೆದ ವರ್ಷದಿಂದ ನನ್ನನ್ನು ಕರೆಯುತ್ತಿದ್ದುದರಿಂದ ನಾನು ಇಲ್ಲವೆನ್ನಲಾರದೆ. ಮುಂಬೈ ಕನ್ನಡಿಗರ ಸ್ನೇಹ ನನಗೆ ತುಂಬಾ ಸಂತೋಷದಾಯಕವಾದದ್ದು ಜೊತೆಗೆ ಪ್ರಾತಃಸ್ಮರಣೀಯರಾದ ಟಿ.ಎಸ್. ವೆಂಕಣ್ಣಯ್ಯನವರಿಗೆ ನಾನು ಸಲ್ಲಿಸಬಹುದಾಗ ಒಂದು ಗೌರವ ಇದೆಂದು ಭಾವಿಸಿ ಬಂದೆ. ಅವರು ನಮ್ಮನ್ನಗಲಿ 60 ವರ್ಷಗಳೇ ಕಳೆದುಹೋಗಿದೆ. ನಾನು ಅವರನ್ನು ನೋಡಿಲ್ಲ. ಅವರು ಏನು ಬರೆದಿದ್ದಾರೆ? ಎಂಬ ಪ್ರಶ್ನೆಗೆ ಏನೂ ಬರೆದಿಲ್ಲಾ ಎಂದೇ ಹೇಳಬೇಕು. ಆದರೆ ಅವರು ಕೃತಿಗಳನ್ನು ರಚಿಸಲಿಲ್ಲ. ಆದರೆ. 'ಆಕೃತಿಗಳನ್ನು ಕೆತ್ತಿದರು' ಅವರ ನಿಧನಾನಂತರ 40 ವರ್ಷಗಳಾದ ಮೇಲೆ ಅವರ ಲೇಖನದ ಒಂದು ಪುಸ್ತಕತರಲಾಯ್ತು. ಅದು ಅವರ ಉಪೋದ್ಘಾತ ಇದೆ 'ಕನ್ನಡ ಸಾಹಿತ್ಯ ಮತ್ತು ಇತರ ಪ್ರಬಂಧಗಳು ಈ ಪ್ರಬಂಧಗಳಲ್ಲಿ ಅವರ ಅಪಾರವಾದ ಸಾಹಿತ್ಯಶಕ್ತಿ ಕೆನೆಗಟ್ಟಿ ನಿಂತಿದೆ. ಕನ್ನಡದ ಜನಪ್ರಿಯ ಕವಿ ಕೆ. ಎಸ್. ನರಸಿಂಹಸ್ವಾಮಿಯವರು, ಟಿ.ಎಸ್. ವೆಂಕಣ್ಣಯ್ಯನವರನ್ನು ಕಲ್ಪವೃಕ್ಷಕ್ಕೆ ಹೋಲಿಸಿ ಬರೆದಿರುವ ಕವಿತೆಯನ್ನು ಉದಾಹರಿಸಿದರು. ವೆಂಕಣ್ಣಯ್ಯನವರ ವ್ಯಕ್ತಿತ್ವ ಎಂತಹದೆಂದು ಈ ಕವಿತೆ ಇಂದಿಗೂ ಸಾರುತ್ತಿದೆ ಎಂದು ಹೇಳುತ್ತಾ ವೆಂಕಣ್ಣಯ್ಯನವರ ಜೀವನದ ಅನೇಕ ಘಟನೆಗಳನ್ನು ತಿಳಿಸಿದರು.

ಅವರ ಎತ್ತರವನ್ನು ಕುರಿತಂತೆ ಕುಳ್ಳಗಿದ್ದ ಸಿದ್ದವ್ವನಹಳ್ಳಿ ಕೃಷ್ಣಶರ್ಮರ ಮಾತು. (ಸ್ವರ್ಗ ಮೇಲಿದೆ ಅಲ್ಲಿಯವರೆಗೂ ಬೆಳೆದು ನಿಂತಿದ್ದ ವೆಂಕಣ್ಣಯ್ಯದವರನ್ನು ಕುರಿತು)

ಸಿದ್ದವ್ವನಹಳ್ಳಿ : ಏನು ಸ್ವರ್ಗದಲ್ಲಿ ಎಲ್ಲರೂ ಸೌಖ್ಯವೋ?''

ವೆಂಕಣ್ಣಯ್ಯ : 'ಹುಂ ಎಲ್ಲರೂ ಸೌಖ್ಯ. ನನ್ನನ್ನು ಪಾತಾಳದಲ್ಲಿ (ಕುಳ್ಳರು) ಇರುವವರು ಹೇಗಿರುವರೆಂದು ನೋಡಿಬರಲು ಕಳಿಸಿದ್ದಾರೆ ಎಂದು'' ಹಾಸ್ಯ ಚಟಾಕಿ ಹಾರಿಸುತ್ತಿದ್ದರು.

ತಳಕು, ವೆಂಕಣ್ಣಯ್ಯನವರ ಸ್ಥಳವಲ್ಲ ತಳುಕಿಗೆ ವೆಂಕಣ್ಣಯ್ಯನವರ ಅಜ್ಜಿ ಹನುಮಕ್ಕ ತಂದೆ ಸುಬ್ಬಣ್ಣ ಅತ್ತೆ ಅಚ್ಚಮ್ಮ ಮತ್ತು ಸುಬ್ಬಣ್ಣನವರ ತಮ್ಮ ಇವರುಗಳು ಥಳುಕಿನ ದೇವಾಲಯವೊಂದರಲ್ಲಿ ರಾತ್ರಿ ಬಂದು ಆಶ್ರಯ ಪಡೆದಿದ್ದರು. ಥಳುಕಿನ ಪಾಟೀಲ ಉಜ್ಜನಗಪ್ಪ ಅವರ್ಯಾರೆಂದು ವಿಚಾರಿಸಿದಾಗ ಪರಶುರಾಮ ಪುರದಲ್ಲಿ ಶೇಕದಾರರಾಗಿದ್ದು ಜನೋಪಕಾರಿಗಳಾಗಿದ್ದ ವೆಂಕಣ್ಣಯ್ಯ (ಟಿ.ಎಸ್. ವೆಂಕಣ್ಣಯ್ಯನವರ ತಾತ) ತೀರಿ ಹೋದ್ದರಿಂದ ಅವರ ಕುಟುಂಬ ನಿರಾಶ್ರಿತರಾಗಿ ಬಂದಿರುವ ವಿಷಯತಿಳಿದು ಪಾಟೀಲ ಊರ ಸಭೆ ಸೇರಿಸಿ ಈ ಕುಟುಂಬಕ್ಕೆ ತಳುಕಿನಲ್ಲಿ ವಸತಿ ಕಲ್ಪಿಸಿದ ಸುಬ್ಬಣ್ಣ 2 ರೂ. ಸಂಬಳಕ್ಕೆ ಶ್ಯಾನುಭೋಗರಲ್ಲಿ ಕೆಲಸ ಮಾಡಲಾರಂಭಿಸಿದರು. ಈ ಊರಿಗೆ ತಳುಕು ಎಂದು ಹೆಸರು ಬಂದದ್ದಕ್ಕೆ ಒಂದು ಐತಿಹ್ಯ ಎರಡು ಹೋರಿಗಳು ತಮ್ಮ ಕೊಂಬುಗಳಿಗೆ ತಳುಕು ಹಾಕಿಕೊಂಡು ಹೋರಾಡಿದ್ದರಿಂದ ಈ ಊರಿಗೆ ತಳುಕು ಎಂದು ಹೆಸರಾಯ್ತುಂತೆ. ಕಾಲಕ್ರಮದಲ್ಲಿ ಸುಬ್ಬಣ್ಣನವರಿಗೆ ವಿವಾಹವಾಗಿ ಅವರಿಗೆ 1-10-1881ರಲ್ಲಿ ವೆಂಕಣ್ಣಯ್ಯನವರ ಜನನವಾಯ್ತು. ವೆಂಕಣ್ಣಯ್ಯ ಬಾಲ್ಯದಿಂದಲೇ ಪ್ರತಿಭಾನ್ವಿತ ರಾಗಿದ್ದರು. ಅವರು L.S. ಪರೀಕ್ಷೆಗೆ ಕಟ್ಟಿದ್ದಾಗಿನ ಒಂದು ಘಟನೆ ಮಕ್ಕಳನ್ನೆಲ್ಲಾ ದೇವಸ್ಥಾನಕ್ಕೆ ಕರೆದೊಯ್ದರು. ಪರೀಕ್ಷೆಯಲಿ ಚೆನ್ನಾಗಿ ಮಾಡಲು ದೇವರು ಬುದ್ಧಿ ಕೊಡಲಿ ಎಂದು, ಅದರೆ ವೆಂಕಣ್ಣಯ್ಯ ದೇವಸ್ಥಾನದಲ್ಲಿ ಕಾಣಲಿಲ್ಲ. ಹೊರಗೆ ಬಂದು ನೋಡಿದಾಗ ಹೊರಗೆ ಕೂತಿದ್ದ ವೆಂಕಣ್ಣಯ್ಯನನ್ನು ಕಂಡ ಉಪಾಧ್ಯಾಯರಿಗೆ ತುಂಬಾ ಸಿಟ್ಟುಬಂತು ಎಂದೂ ಬಯ್ಯದ ಮೇಷ್ಟ್ರು ಏನಿದು ಕಪಿ ಚೇಷ್ಟೆ ದೇವಾಲಯಕ್ಕೆ ಏಕೆ ಬರಲಿಲ್ಲ?'' ಎಂದಾಗ ವೆಂಕಣ್ಣಯ್ಯ ಉತ್ತರಿಸಿದರು. ದೇವರಲ್ಲಿ ಯಾವುದನ್ನೂ ಬೇಡಬಾರದು'' ದೇವರಿಗೆ ಹಣ್ಣುಕಾಯಿ ಮಾಡಿಸಿದವರೆಲ್ಲಾ ನಾಪಾಸಾದರು. ವೆಂಕಣ್ಣಯ್ಯಪಾಸಾದರು. ಈ ಗುಂಪಿನಲ್ಲಿ ಸದಾ ಓದುತ್ತಿದ್ದ ವೆಂಕಣ್ಣಯ್ಯನವರ ಭಾವನೂ ಒಬ್ಬರು ಇದನ್ನು ಕಂಡಿದ್ದ. ಇವರ ತಾಯಿ ಪ್ರಶ್ನಿಸಿದಾಗ ವೆಂಕಣ್ಣಯ್ಯ ಕೊಟ್ಟ ಉತ್ತರ'' ಬರೀ ಓದಿದರೆ ಪ್ರಯೋಜನವಿಲ್ಲಮ್ಮಾ ಸರಿಯಾಗಿಗ್ರಹಿಸಬೇಕು'' ವೆಂಕಣ್ಣಯ B.A. ಪಾಸು ಮಾಡಿದಾಗ ಇಡೀ ಊರಿಗೆ ಊರೇ ಹಬ್ಬ ಆಚರಿಸಿ ಸಂಭ್ರಮ ಪಟ್ಟರಂತೆ. ಮೊದಲವರ್ಷದ M.A. ಮುಗಿಸಿ ಮುಂಬೈಗೆ ಬಂದು ಅಂಚೆ ಕಛೇರಿಯಲ್ಲಿ ಕೆಲಸಕ್ಕೆ ಸೇರಿದರು. ಇವರೊಬ್ಬರೇ ಕನ್ನಡಿಗರು ಮಿಕ್ಕವರೆಲ್ಲಾ ಮರಾಠಿಗಳಾಗಿದ್ದು. ಇವರನ್ನು ಬಹಳಹೀನಾಯವಾಗಿ ಕಾಣುತ್ತಿದ್ದರು. ಇದನ್ನು ಸಹಿಸದ ವೆಂಕಣ್ಣಯ್ಯ ಅಂಚೆ ಕಛೇರಿ ಯಜಮಾನೊಂದಿಗೆ ಜಗಳಾಡಿ ಮದ್ರಾಸಿಗೆ ಬಂದು ತಮ್ಮ M.A. ಪೂರ್ತಿಮಾಡಿದರು. ಬೊಂಬಾಯಿಯಲ್ಲಿದ್ದಾಗ ಮರಾಠಿ ಜನಗಳಿಂದ ಅನುಭವಿಸಿದ ಅವಮಾನ ಇವರಲ್ಲಿನ ಕನ್ನಡ ಅಭಿಮಾನವನ್ನು ಜಾಗೃತಗೊಳಿಸಿತು.

ವೆಂಕಣ್ಣಯ್ಯನವರು ಹಾಗೂ ಎ.ಆರ್. ಕೃಷ್ಣ ಶಾಸ್ತ್ರಿಗಳು ಇಬ್ಬರನ್ನೂ ಜನ ಇವರ ಸ್ನೇಹಕ್ಕಾಗಿ ಅಶ್ವಿನಿದೇವತೆಗಳೆಂದು ಕರೆಯುತ್ತಿದ್ದರು. ಎ. ಆರ್. ಕೃಷ್ಣಶಾಸ್ತ್ರಿಗಳು ಪ್ರಾಚ್ಯ ಸಂಶೋಧಕರಾಗಿ ಕೆಲಸ ಮಾಡುತ್ತಿದ್ದರು.

ವೆಂಕಣ್ಣಯ್ಯನವರು ಪ್ರಬುದ್ಧ ಕರ್ನಾಟಕವನ್ನು ವಹಿಸಿಕೊಂಡಾಗ ವೆಂಕಣ್ಣಯ್ಯನವರ ಆಪ್ತರುಗಳು ಪ್ರಬುದ್ಧ ಕರ್ನಾಟಕಕ್ಕಾಗಿ ಕೆಲಸಮಾಡುತ್ತಿದ್ದ ವೈಖರಿಯನ್ನು ಎ.ಆರ್. ಕೃಷ್ಣ ಶಾಸ್ತ್ರಿಗಳು. ಹೀಗೆ ಬರೆದಿದ್ದಾರೆ. ವೆಂಕಣ್ಣಯ್ಯ ಬೆಲ್ಲ, ಬೆಲ್ಲಕ್ಕೆ ಇರುವೆಗೊದ್ದ ಯಾಲಾಗಲೂ ಮುತ್ತಿಯೇ ಇರುತ್ತವೆ. ಈ ಪಿಪೀಲಿಕಸೇನೆ ವೆಂಕಣ್ಣಯ್ಯನವರ ಸುತ್ತಾ ಕೆಲಸಮಾಡುತ್ತಿದ್ದ ರೀತಿಯೇ ಅಸಾಧ್ಯ. ಒಂದು ಕಡೆ ಪತ್ರಿಕೆಗೆ ಕಾಗದ ಸುತ್ತುವ ಕೆಲಸ ಮತ್ತೊಂದು ಕಡೆ ಅವಕ್ಕೆ ವಿಳಾಸ ಬರೆಯುವ ಕೆಲಸ ಮತ್ತೊಂದು ಕಡೆ ಸ್ಟ್ಯಾಂಪ್ ಅಂಟಿಸುವವರ ಗದ್ದಲ ಹೀಗೆ ಕಾಗದ, ಸ್ಟ್ಯಾಂಪು, ಪೇಸ್ಟುಗಳೊಂದಿಗೆ ಪಿಪೀಲಕಗಳು ಕೆಲಸ ಮಾಡಿದ್ದೂ, ಮಾಡಿದ್ದೇ ! ಕನ್ನಡ ಸಾಹಿತ್ಯ ಪರಿಷತ್ತು 1915ರಲ್ಲಿ ಸ್ಥಾಪಿತವಾಯ್ತು. ಪರಿಷತ್ತಿನ ಸ್ಥಾಪನೆಯಲ್ಲಿ ಮುಂಚೂಣಿಯಲ್ಲಿದ್ದ ವೆಂಕಣ್ಣಯ್ಯ ಎಂದೂ ಅಧ್ಯಕ್ಷರಾಗಲಿಲ್ಲ. ಯಾರಾದರೂ ಆ ಸಲಹೆ ಮಾಡಿದರೆ, ನನಗಿಂತ ದೊಡ್ಡವರಿದ್ದಾರೆ. ಅವರದೆಲ್ಲಾ ಆಗಲಿ ಎಂದೂ ವಿನಯದಿಂದ ಜಾರಿಕೊಳ್ಳುತ್ತಿದ್ದರು. ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಹುದ್ದೆಗೆ ಟಿ.ಎಸ್. ವೆಂಕಣ್ಣಯ್ಯನವರು ಯೋಗ್ಯರೆಂದು ವಿಶ್ವವಿದ್ಯಾನಿಲಯ ಹಾಗೂ ಎಂ. ಎಸ್. ಸುಬ್ಬರಾಯರು ಅಭಿಪ್ರಾಯ ಪಟ್ಟಿದ್ದರೂ ವೆಂಕಣ್ಣಯ್ಯನವರು ಆ ಹುದ್ದೆಗೆ ಅರ್ಜಿಹಾಕದೆ ನಮ್ಮ ಕೃಷ್ಣ (ಎ. ಆರ್. ಕೃಷ್ಣ ಶಾಸ್ತ್ರಿಗಳು) ಆ ಜಾಗಕ್ಕೆ ಹೆಚ್ಚು ಯೋಗ್ಯ ಅವನೇ ಹಾಕಲಿ ಎಂದು ಸುಮ್ಮನಿದ್ದರು. ಕೊನೆಯ ತಾರೀಖು ಬಂದರೂ ವೆಂಕಣ್ಣಯ್ಯ ಅರ್ಜಿಹಾಕಲಿಲ್ಲ, ಆಗ ಪ್ರಿನ್ಸಿಪಾಲರಾಗಿದ್ದ ಶ್ರೀ ಪಿಟ್‌ಕಾಫ್‌ರವರು ವೆಂಕಣ್ಣಯ್ಯನವರನ್ನು ಕರೆಕಳಿಸಿ ಅವರಿಂದ ಅರ್ಜಿ ತೆಗೆದುಕೊಂಡು ಅವರಿಗೆ ಆ ಹುದ್ದೆ ಕೊಟ್ಟರು. ಈ ಹುದ್ದೆಯನ್ನಲಂಕರಿಸಿದ ಮೇಲೆ ಹುಟ್ಟಿದ ಮೊದಲ ಸಂಘ 'ಯೂನಿವರ್ಸಿಟಿ ಟೀಚರ್ಸ್ ಅಸೋಸಿಯೇಷನ್' ಅದರ ಪ್ರಥಮ ಅಧ್ಯಕ್ಷರು ವೆಂಕಣ್ಣಯ್ಯನವರು. ಎ.ಎನ್. ಮೂರ್ತಿರಾಯರ ಶಬ್ದದಲ್ಲಿ ಹೇಳಬೇಕೆಂದರೆ ನಮ್ಮೆಲ್ಲರ ಕಾಮನ್ ರೂಮ್ ವಶಪಡಿಸಿಕೊಂಡರು. ಇಲ್ಲಿ ಕೆಲಸ ಮಾಡುತ್ತಾ ಹರಿಶ್ಚಂದ್ರ ಕಾವ್ಯ ಸಂಪಾದಿಸಿ ಪರಿಷ್ಕರಿಸಿ ಬೆಳಕಿಗೆ ತಂದರು. ಮೂಲಕೃತಿಯನ್ನು ಪರಿಷ್ಕರಿಸಿದ ಕೀರ್ತಿ ಇವರದೇ ತಾವು ಹಿಂದೆ ನಿಂತು ಪ್ರೇರೇಪಿಸಿ ಅನೇಕರಿಂದ ಉತ್ತಮ ಕೆಲಸಗಳನ್ನು ಮಾಡಿಸಿದ್ದಾರೆ.


FOR ALL YOUR DOMESTIC AND INTERNATIONAL TRAVEL ARRANGEMENTS

CONTACT

AUGUST TRAVEL SERVICE

Agents For
INDIAN AIRLINES &
JET AIRLINES

REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 768 2591 * 768 2558
767 0902
GRAMS : AUGTRASERV

ALSO AT :
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

ಇವರ ಪಟ್ಟ ಶಿಷ್ಯರಾದ ಕೆ.ವಿ. ಪುಟ್ಟಪ್ಪನವರ ಶಬ್ದಗಳಲ್ಲೇ ಹೇಳಬೇಕೆಂದರೆ' ನಾನು ವೆಂಕಣ್ಣಯ್ಯನವರ ವ್ಯಕ್ತಿತ್ವದಿಂದ ಆಕರ್ಷಿತವಾದಂತೆ ಮತ್ಯಾರಿಂದಲೂ ಆಕರ್ಷಿತನಾಗಲಿಲ್ಲ. ಅವರ ವ್ಯಕ್ತಿತ್ವವೆ ಅಂತಹುದು, ಅವರ ಭಂಗಿಯೇ ಅಂತಹುದು, ಅವರ ವ್ಯಕ್ತಿತ್ವ ಸೂರ್ಯನ ಬೆಳಕಿನಂತೆ ಪ್ರಖರವಾದದ್ದಲ್ಲ, ಚಂದ್ರಕಾಂತಿಯಂತೆ ಆಹ್ಲಾದವೂ ಆಕರ್ಷಣೀಯವೂ ಆದದ್ದು. ಅವರು ರೋಗಿಷ್ಟ ರೆಂಬೆಗಳನ್ನು ಕಡಿದು ಕಿತ್ತುಹಾಕಿ ಆರೋಗ್ಯಕರ ರೆಂಬೆಗಳನ್ನು ಬೆಳೆಯಿಸಿದರು.''

ಒಮ್ಮೆ ಯೋಜನ ಸಮ್ಮೇಳನದಲ್ಲಿ ಕು.ವೆಂ.ಪು. ಮಾಡಿದ ಭಾಷಣಕ್ಕೆ ಆಕ್ಷೇಪಣೆಗಳೆದ್ದು ಇದರ ವಿಚಾರಣೆಗೆ ವೆಂಕಣ್ಣಯ್ಯನವರನ್ನು ವಿಚಾರಣಾ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಯ್ತು. ಆಗ ವೆಂಕಣ್ಣಯ್ಯನವರು ಹೇಳಿದ ಮಾತು ''ನನ್ನ ಮಗನಿಗೆ ಬುದ್ಧಿ ಹೇಳಬೇಕೆಂದರೆ ಇದಕ್ಕಿಂತ ಹೆಚ್ಚಿಗೆ ಏನನ್ನೂ ಹೇಳಲಾರೆ''

ಎಸ್.ವಿ. ರಂಗಣ್ಣನವರನ್ನು ಕುಮಾರವ್ಯಾಸ ಭಾರತದ ಕಡೆಗೆ ತಿರುಗಿಸಿದ ಕೀರ್ತಿ ಹಾಗೂ ಎಂ.ವಿ. ಸೀತಾರಾಮಯ್ಯನವರ ಕಲಾಭ್ಯಾಸಕ್ಕೆ ಸಹಾಯ ಮಾಡಿದ ಕೀರ್ತಿ ವೆಂಕಣ್ಣಯ್ಯನವರದ್ದು.

ಒಮ್ಮೆ ಎ. ಎನ್. ಮೂರ್ತಿರಾಯರು ಯಾವುದೋ ತೊಂದರೆಗೆ ಸಿಕ್ಕಿ ತೊಳಲಾಡುತ್ತಾ ಕುಕ್ಕನಹಳ್ಳಿ ಕೆರೆದಂಡೆಯಲ್ಲಿ ಕುಳಿತಿದ್ದಾಗ ವೆಂಕಣ್ಣಯ್ಯನವರು ಹೇಳಿದ ಮಾತು. ''ದೇವರೇನು ನಮ್ಮನ್ನು ಸದಾಸುಖವಾಗಿಡುವೆನೆಂದು ಬಾಂಡು ಬರೆದು ಕೊಟ್ಟಿದ್ದಾನೆಯೇ? ಏಳಿ ಏನು ಬಂದರೂ ಎದುರಿಸಬೇಕು ಎಂದು ಅವರಿಗೆ ವಾಸ್ತವದ ಅರಿವು ಮೂಡಿಸಿದರಂತೆ. ಬಿ. ಎಂ. ಶ್ರೀಯವರ ಹೆಸರಿನ ಸ್ಕಾಲರ್‌ಶಿಪ್ ತಮ್ಮ ಶ್ಯಾಮರಾಯರಿಗೆ ಬಂದಾಗ ಅದನ್ನು ಹಿಂತಿರುಗಿಸಿ ತಮ್ಮ ಕೇಳಿದಾಗ ತಮ್ಮನಿಗೆ ಕೊಟ್ಟ ಉತ್ತರ. ನನ್ನಂತಹ ಅಣ್ಣನಿರುವಾಗ ಆ ನೂರು ರೂಪಾಯಿನ ಸ್ಕಾಲರ್‌ಶಿಪ್‌ನಿಂದ ಏನಾಗಬೇಕಾಗಿದೆ? ಅದಿನ್ನಾರಾದರೂ ಬಡವರಿಗೆ ಸಿಕ್ಕಲಿ'' ಎಂದು ತಮ್ಮನಿಗೆ ಸಮಾಧಾನ ಹೇಳಿದರಂತೆ. ಒಮ್ಮೆ ಮನೆಗೆ ಸಾಮಾನು ತರುವ ಕಿರಾಣಿ ಅಂಗಡಿಯಲ್ಲಿ ಸಾಲ ಏರಿ 300 ರೂ. ಮುಟ್ಟಿದಾಗ ಬ್ಯಾಂಕಿನಲ್ಲಿ 300 ರೂ. ಸಾಲ ಮಾಡಿದರು. ಇವರ ವರ್ಚಸ್ಸಿನಿಂದ ಸಾಲಜಾಗ್ರತೆ ಮಂಜೂರಾಯ್ತು ಆಹಣ ಮನೆಗೆ ತಂದ ದಿನವೇ ಪರಿಚಯಸ್ಥರೊಬ್ಬರು ಬಂದು ಬಹಳ ಸಂಕೋಚದಿಂದ 'ತಾಯಿ ತೀರಿ ಹೋದರು ದಿನಾಕಾಲವಾಗಬೇಕಿದೆ ಹಣದ ಅಡಚಣೆ ಎಂದರಂತೆ 'ಎಷ್ಟು ಹಣ ಬೇಕು'? ಎಂದು ಕೇಳಿದರು ವೆಂಕಣ್ಣಯ್ಯ 'ಸುಮಾರು ಇನ್ನೂರೈವತ್ತು ಬೇಕಾಗುತ್ತದೆ. ಮತ್ತೆಲ್ಲಾದರೂ ಪ್ರಯತ್ನಿಸುವೆ' ಎಂದಾಗ ತಾವು ಬ್ಯಾಂಕಿನಿಂದ ತಂದಿದ್ದ 300 ರೂಪಾಯಿ ಕೈಯ್ಯಲ್ಲಿಟ್ಟು 'ಸಧ್ಯಕ್ಕೆ ನನ್ನಲ್ಲಿ ಇಷ್ಟಿದೆ. ಇದರಲ್ಲಿ ಕೆಲಸ ನಡೆದರೆ ಸಂತೋಷ'ವೆಂದು ಹೇಳಿ ತಿಳಿಸಿದ ಧಾರಾಳಿಗಳು.

ಒಮ್ಮೆ ಖಾದೀ ಅಂಗಡಿಯಲ್ಲಿ ರುಮಾಲು (ಪೇಟ) ಕೊಳ್ಳಲು ಹೋದಾಗ ''ಖಾದೀ ಅಂಗಡಿಯಲ್ಲಿ ಗೋರೂರು ರಾಮಸ್ವಾಮಿ ಅಯ್ಯಂಗಾರ್ಯರು ಕೆಲಸ ಮಾಡುತ್ತಿದ್ದರು. ಅವರೊಂದಿಗೆ ವೆಂಕಣ್ಣಯ್ಯ'' ಅಲ್ಲ. ರುಮಾಲಿಗೆ ಉದ್ದಕ್ಕೂ ಜರಿ ಇಟ್ಟು ಬೆಲೆ ಬಹಳ ಇಟ್ಟಿದ್ದೀರಿ. ಮುಂದೆ ಮಾತ್ರ ಜರಿ ಕಾಣುತ್ತದೆ. ಮಿಕ್ಕಿದ್ದೆಲ್ಲಾ ಮುಚ್ಚಿ ಹೋಗುತ್ತದೆ. ಮುಂದೆ ಕಾಣುವಷ್ಟು ಮಾತ್ರ. ಜರಿ ಇಟ್ಟು ಮಿಕ್ಕ ಭಾಗದ ಜರಿ ಕಡಿಮೆ ಮಾಡಿ ಬೆಲೆಯನ್ನೂ ಏಕೆ ಇಳಿಸಬಾರದು''? ಎಂದು ಸಲಹೆ ಕೊಟ್ಟರು.

ಗೋರೂರು ನಿಮ್ಮ ಸಲಹೆ ನಮ್ಮ ಶ್ಯಾನುಭೋಗರ ಲೆಕ್ಕದ ರೀತಿ ಇದೆ

ವೆಂಕಣ್ಣಯ್ಯ ''ನೀವು ಬರೀ ಮಾರಿದ್ದೀರಿ ರುಮಾಲುಗಳನ್ನು ನನ್ನಂತೆ ಕೊಂಡಿದ್ದರೆ ನಿಮಗೂ ಗೊತ್ತಾಗುತ್ತಿತ್ತು''

ಮುಂದೆ ವೆಂಕಣ್ಣಯ್ಯನವರು ತರಗತಿಯಲ್ಲಿ ತಮ್ಮ ಮೆಲುವಾದ, ಸಮ್ಮೋಹನವಾದ ದನಿಯಲ್ಲಿ ಕಾವ್ಯ ಓದುತ್ತಿದ್ದಾರೆ. ನಿಃಶಬ್ದದಿಂದ ವಿದ್ಯಾರ್ಥಿಗಳು ಕೇಳುತ್ತಿದ್ದಾರೆ. ಆಗ ಒಬ್ಬ ವಿದ್ಯಾರ್ಥಿ ಎದ್ದುನಿಂತು ''ಸ್ವಲ್ಪ ಗಟ್ಟಿಯಾಗಿ ಓದಿ ಕೇಳುವುದಿಲ್ಲಾ' ಎಂದ. ವ್ಯತ್ಯಯವಾಯು ತಲೆಎತ್ತಿ ನೋಡಿದರು. ಸಿಟ್ಟಿಲ್ಲ, ಸಿಡುಕಿಲ್ಲ, ಬೇಸರವಂತೂ ಇಲ್ಲವೇ ಇಲ್ಲ. ಗಂಭೀರ ಮೇಲುದನಿಯಲ್ಲಿ ಬಂತು ಉತ್ತರ ''ನಾನು ಸಾವಿರಾರು ಜನರಿರುವ ಸಭೆಯಲ್ಲಿ ಕೂಡ ಇದೇ ದನಿಯಲ್ಲಿ ಮಾತನಾಡುತ್ತೇನೆ. ಕೇಳುವ ಅಭಿಲಾಷೆ ಇದ್ದಲ್ಲಿ ಕೇಳುತ್ತದೆ'' ಎಂದು ಪಾಠ ಅದೇ ದನಿಯಲ್ಲಿ ಮುಂದುವರಿಯಿತು. ಗುಲ್ಬರ್ಗಾದ ಸಾಹಿತ್ಯ ಸಮ್ಮೇಳನದ ಸಂದರ್ಭ ಡಿ. ಎಲ್. ನರಸಿಂಹಾಚಾರ್, ವೆಂಕಣ್ಣಯ್ಯ, ಕುವೆಂಪು ಎಲ್ಲರೂ ಇದ್ದರು. ಕುವೆಂಪುರವರ ನಶ್ಯ ತೀರಿ ಹೋಗಿ ತುಂಬಾ ಪಜೀತಿಯಾಗಿದೆ. ವೆಂಕಣ್ಣಯ್ಯನವರಲ್ಲಿ ಕೇಳಲಾರರು, ಬಿಡಲಾರರು. ಆದರೆ ಕೇಳದೆ ವಿಧಿಯಿಲ್ಲ. ಕೇಳಿದವರು ''ನನ್ನ ಟ್ರಂಕಿನಲ್ಲಿದೆ ತುಂಬಿಕೊಳ್ಳಿ ಎಂದರು'' ವೆಂಕಣ್ಣಯ್ಯ ನೋಡಿದರೆ ಒಂದು ದೊಡ್ಡ ಟಿನ್ನಿನ ಡಬ್ಬಿ ತುಂಬಾ ಇದೆ ! ಕುವೆಂಪು ತಮ್ಮ ಡಬ್ಬಿಗೆ ತುರುಕಿ, ತುರುಕಿಕೊಂಡು ಕೈಯಲ್ಲಿ ಒಂದು ದೊಡ್ಡ ಚಿಟಿಕಿ ಹಿಡಿದುಕೊಂಡೇ ಹೊರಟಿದ್ದು.

ಡಿ.ವಿ.ಜಿ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಸನ್ನಿವೇಶ ವೆಂಕಣ್ಣಯ್ಯನವರು. ಎ. ಆರ್. ಕೃಷ್ಣಶಾಸ್ತ್ರಿಗಳು ಎಲ್ಲರೂ ಇದ್ದಾರೆ. ಯಾವುದೋ ಗಹನ ಚರ್ಚೆನಡೆದಿದೆ. ಬಗೆ ಹರಿಯುತ್ತಿಲ್ಲ. ನಾಳೆ ನೋಡೋಣ ಎಂದು ಏಳಬೇಕು. ಅಷ್ಟರಲ್ಲಿ ಒಳಗಿಂದ ಬೆಲ್ಲದ ದೋಸೆ ಸೀ ಕರಣೆ, ಬೇಲದ ಹಣ್ಣಿನ ಪಾನಕ ಬಂತು. ಡಿ.ವಿ.ಜಿ. ಹೇಳಿದರು. ''ಒಂದು ಚೂರು ದೋಸೆ ಮುರಿಯಿರಿ ಸೀಕರಣೆಯನ್ನು ಕೊಂಚ ಸೇರಿಸಿಕೊಂಡು ಬಾಯಿಗಿಟ್ಟು ಮೇಲೆ ಬೇಲದ ಹಣ್ಣಿನ ಪಾನಕ ಗುಟುಕರಿಸುತ್ತಾ ಸಾಗಿ ಆಗ ಸಮಸ್ಯೆಗೆ ಪರಿಹಾರ ದೊರೆಯುತ್ತದೆ. ಮುಂದೆ ಡಿ.ವಿ.ಜಿ. ಹೇಳಿದಂತೆಯೇ ಆಯ್ತು. ಡಿ.ವಿ.ಜಿ. ಯಾವಾಗಲೂ ತಿಂಡಿಗಳ ಬಗ್ಗೆ ಮಾತನಾಡುವುದು ಸಲಹೆ ಕೊಡುವುದು ಜಾಸ್ತಿ. ಕನ್ನಡ ಸಾಹಿತ್ಯ ಪರಿಷತ್ತಿನ ಮೀಟಿಂಗುಗಳು ಸೇರುತ್ತಿದ್ದಾಗ ಮಾಡುತ್ತಿದ್ದ ತಿಂಡಿಗಳಿಗೆ ಡಿ.ವಿ.ಜಿ.ಯವರ ಸಲಹೆ ಸದಾ ಇರುತ್ತಿತ್ತು. ಹಸಿ ಅವರೆಕಾಯಿ ಕಾಲದಲ್ಲಿ ಸೊಗಸಾದ ಅವರೆ ಕಾಳು ಹಾಕಿಮಾಡಿದ ಉಪ್ಪಿಟ್ಟಿಗೆ ಮಧ್ಯೆ ಮಧ್ಯೆ ಒಂದೊಂದು ಮೆಣಸಿನಕಾಳು ಸಿಕ್ಕುತ್ತಿದ್ದರೆ, ಪಿಡಿಚೆ ಮಾಡಿದ್ದರೆ ಬಹಳ ಸೊಗಸು. ಅಂಬೊಡೆಗೆ ಮಧ್ಯೆ ಮಧ್ಯೆ ಒಂದೊಂದು ಚೂರು ಹಸಿ ಶುಂಠಿ ಸಿಕ್ಕುತ್ತಿದ್ದರೆ ಚೆನ್ನ ಹೀಗೆ ಸಾಗುತ್ತಿತ್ತು. ಅವರ ಸಲಹೆಗಳು.

ವೆಂಕಣ್ಣಯ್ಯ ಬಹಳ ಉದ್ದದ ಮನುಷ್ಯರಾಗಿದ್ದರಿಂದ ಕಾಲು ಮಡಿಸಿಕೊಡಲು ಸಾಧ್ಯವಿಲ್ಲದೆ ಅವರೆಂದೂ ಮುಂದಿನ ಸಾಲಿನಲ್ಲಿ ಕೂರುತ್ತಿರಲಿಲ್ಲ. ಒಮ್ಮೆ ಮುಂದಿನ ಸಾಲಿನಲ್ಲಿ ಕುಳಿತಿದ್ದ ಹುಡುಗ ವೆಂಕಣ್ಣಯ್ಯ ತನಗೆ ಕಾಲುತಾಗಿಸಿದರೆಂದು ದೂರಿದಾಗ ಕ್ಲಾಸು ತೆಗೆದುಕೊಂಡಿದ್ದ ಪ್ರಿನ್ಸಿಪಾಲ್‌ಗ್ರೇವಿಯರ್‌ಗೆ ಅಸಾಧ್ಯ ನಗು ಬಂತಂತೆ. ಇವರನ್ನು ಚೇಡನ ಕಾಲಿನ ಮನುಷ್ಯನೆಂದು ಹಾಸ್ಯ ಮಾಡಿನಕ್ಕನಂತೆ.

ತಮ್ಮ ಅಭಿಮಾನಿಗಳು ಮತ್ತು ಸ್ನೇಹಿತರಿಂದಲೂ ತಮ್ಮ ಉದ್ದ ಕಾಲಿನಿಂದ ಮಾತು ಕೇಳುತ್ತಿದ್ದರು. ವೆಂಕಣ್ಣಯ್ಯ ಹಾಳು ಮನುಷ್ಯ ನಮ್ಮೆಲ್ಲರಿಗೂ ಪೀಡೆಯಾಗಿ ಇಷ್ಟುದ್ದವಾಗಿದ್ದಾನೆ

ಎನ್ನುತ್ತಿದ್ದರು. ಅಭಿಮಾನಿಗಳು ಅಭಿಮಾನದಿಂದ ವೆಂಕಣ್ಣಯ್ಯನವರ ತಮ್ಮ ಶ್ಯಾಮರಾವ್ ಪರೀಕ್ಷೆಗೆ ಕುಳಿತಿದ್ದಾರೆ ಅವರ ಉತ್ತರ ಪತ್ರಿಕೆಯನ್ನು ಪ್ರಾಧ್ಯಾಪಕರಾಗಿ ವೆಂಕಣ್ಣಯ್ಯ ಪರೀಕ್ಷಿಸಬೇಕಾಗಿದೆ. ವೆಂಕಣ್ಣಯ್ಯ ಉತ್ತರಪತ್ರಿಕೆ ಪರಿಶೀಲಿಸಿದರು. ನಂಬರು ಹಾಕಲಿಲ್ಲ. ಅದನ್ನು ಬೇರೊಂದೆಡೆ ಗುರುತು ಮಾಡಿಟ್ಟುಕೊಂಡು ಬೇರೇ ಅಧ್ಯಾಪಕರಲ್ಲಿಗೆ ಇದನ್ನು ಕಳಿಸಿಕೊಟ್ಟು. ಅವರಿಂದ ಪರಿಶೀಲಿಸಿ ನಂಬರ್ರನ್ನೂ ಹಾಕಿಸಿ ಪೇಪರಿನ ಮೇಲೆ ಅವರ ಸಹಿಯನ್ನೂ ಪಡೆದರು. ತಮ್ಮನೆಂದು ಜಾಸ್ತಿ ನಂಬರುಕೊಟ್ಟರೇ!? ಇಲ್ಲಾ ಕೊಟ್ಟನೆಂದು ಜನ ತಿಳಿದರೆ?'' ಎಂಬ ಭಾವನೆ ನಾವು ಪ್ರಾಮಾಣಿಕರಾಗಿದ್ದರೆ ಸಾಲದು, ನಾವು ಪ್ರಾಮಾಣಿಕರೆಂದು, ಇನ್ನೊಬ್ಬರಿಗೂ ತಿಳಿಯಬೇಕು. ಇದು ಅವರ ಅಭಿಪ್ರಾಯ.

ಶ್ಯಾಮರಾವ್ ಒಮ್ಮೆ ''ನೀವೇಕೆ ಬರೆಯಬಾರದು? ಶ್ರೀಕೃಷ್ಣನನ್ನು ಕುರಿತು ಬರೆಯಿರಿ'' ಎಂದಾಗ ವೇದ ದ್ರಷ್ಟಾರರಾದ ನಮ್ಮ ಮಹರ್ಷಿಗಳೇ ತಾವ್ಯಾರೆಂದು ಹೇಳಿಕೊಂಡಿಲ್ಲ. ನಾನ್ಯಾವ ದೊಡ್ಡ ಮನುಷ್ಯ? ಅಬ್ಬಾ! ಎಂದರೆ ನಾನು ಬರೆದದ್ದನ್ನು 70 ವರ್ಷ ಜನ ಛಾಪಿಸಿಕೊಂಡಾರು ನಂತರ ಯಾರು ಕೇಳಬೇಕು ಇದವರ ವಿನೀತ ಭಾವ.

ಕುವೆಂಪುರವರ ಮಾತಿನಲ್ಲಿ ಹೇಳಬೇಕೆಂದರೆ ಅವರು ಬರೆಯಲಿಲ್ಲ. ನನ್ನಂಥ ಸೃಷ್ಟಿಕರ್ತರನ್ನು ಸೃಷ್ಟಿಸಿದರು. ಕುವೆಂಪು, ಪು.ತಿ.ನ., ಡಿ. ಎಲ್. ನರಸಿಂಹಾಚಾರ, ಪರಮೇಶ್ವರ ಭಟ್ಟ, ವೆಂಕಟಸುಬ್ಬಯ್ಯನವರಂತಹ ಲೇಖಕರ ಹಿಂಡನ್ನೇ ಸೃಷ್ಟಿಸಿದರು.

ಕುವೆಂಪುರವರ ಒಂದು ಕೃತಿಯನ್ನು ಓದಿದವರೊಬ್ಬರು ವೆಂಕಣ್ಣಯ್ಯನವರ ತಮ್ಮ ಶ್ಯಾಮರಾಯರಲ್ಲಿ, ಪುಟ್ಟಪ್ಪನವರು ಸ್ಮಾರ್ತರೋ, ವೈಷ್ಣವರೋ'' ಎಂದಾಗ

ಶ್ಯಾ :- ''ಪುಟ್ಟಪ್ಪನವರು ಒಕ್ಕಲಿಗರು'' ಎಂದರಂತೆ ಅಲ್ಲೇ ಇದ್ದ ವೆಂಕಣ್ಣಯ್ಯನವರು ''ಪುಟ್ಟಪ್ಪ 16 ಆಣೆ ಬ್ರಾಹ್ಮಣರು, ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಹೇಳಿಲ್ಲವೇ?''

''ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ'' ಎಂದರಂತೆ ವಿಶಾಲ ಮನೋಭಾವದ ವೆಂಕಣ್ಣಯ್ಯ.

ಅವರು ಬಸವರಾಜದೇವರಗಳೆಯನ್ನು ಶೋಧಿಸಿ ಪ್ರಕಾಶಕ್ಕೆ ತಂದಾಗ ಅವರ ಪರಿಚಯದವರೊಬ್ಬರು. ಬಸವಣ್ಣನನ್ನು ಏಕೆ ತಲೆಮೇಲೆ ಹೊತ್ತು ಕುಣಿಸುತ್ತೀರಿ? ಅದರ ಬದಲು ರಾಮಾಯಣವನ್ನೇ ಮಹಾ ಭಾರತವನ್ನೋ ತರಬಾರದೇ?'' ಎಂದಾಗ ವೆಂಕಣ್ಣಯ್ಯ

''ಗುಣಕ್ಕೆ ಮತ್ಸರವೇ''? ಎಂದರಂತೆ.

ಕುವೆಂಪು, ಟಾಲ್‌ಸ್ಟಾಯ್, ಹಾರ್ಡಿ, ರೋಮರೋಲ ಮುಂತಾದವರ ಕೃತಿಗಳನ್ನು ಓದಿ ಸ್ಫೂರ್ತಿ ಪಡೆದು ವೆಂಕಣ್ಣಯ್ಯ ನವರನ್ನು ''ಉತ್ತರನ ಸಾಹಸ ಕಥನ, ಕಾರಣ, ವರ್ಣನ ಮೂರೂ ಇದೆ. ಒಂದು ಕಾದಂಬರಿ ಬರೆದು ಬಿಡಿ'' ಎಂದು ಪ್ರಾರ್ಥಿಸಿದಾಗ ಅವರಿಂದಲೇ ಎರಡು ಬೃಹತ್ ಕಾದಂಬರಿಗಳನ್ನು ಬರೆಯಿಸಿರಂತೆ. ಅವರು ಬಳ್ಳಾರಿ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದೇ ಕೊನೆಯಾಯ್ತು. ತಾ. 24-2-1939 ರಂದು ಕಲ್ಪವೃಕ್ಷದಂತಹ ಪರೋಪಕಾರಿ ಉನ್ನತ ವ್ಯಕ್ತಿತ್ವದ ವೆಂಕಣ್ಣಯ್ಯನವರು ಇನ್ನಿಲ್ಲವಾದರು. ಅಂದು ರಾತ್ರಿ 10-30ರ ಸಮಯ ಕುವೆಂಪು ಒಂಟಿಕೊಪ್ಪಲಿನ ತಮ್ಮ ಕೊಠಡಿಯಲ್ಲಿ ಬರೆಯುತ್ತಾ ಕುಳಿತಿದ್ದರು. ತಮ್ಮ ಪ್ರಿಯ ಶಿಷ್ಯನಿಗೆ ತಾವು ಹೋದದ್ದು ಸೂಚಿಸಿದರಂತೆ. ಎರಡು ಬಾರಿ ಬಾಗಿಲು ತಟ್ಟಿದ ಸದ್ದು ಕೇಳಿ ಹೊರಬಂದ ಕುವೆಂಪು ಯಾರನ್ನೂ ಕಾಣಲಿಲ್ಲ. ಮಾರನೇ ದಿನ ತಮ್ಮ ಗುರುಗಳ ನಿಧನವಾರ್ತೆ ಕೇಳಿದರು.

ವೆಂಕಣ್ಣಯ್ಯನವರು ತಂದ ಕೃತಿಗಳು

ಬಂಗಾಲಿ ಅನುವಾದ ಗ್ರಂಥ'ಗಳು (ರಾಮಕೃಷ್ಣಾಶ್ರಮದ ಸಂಸರ್ಗದಿಂದ)

(1) ರಾಮ ಕೃಷ್ಣಲೀಲಾ ಪ್ರಸಂಗ

(2) ರಾಮಕೃಷ್ಣ ಪರಮಹಂಸ

(3) ಪ್ರಾಚೀನ ಸಾಹಿತ್ಯ '

ಕನ್ನಡ ಗ್ರಂಥಮಾಲೆಯನ್ನಾರಂಭಿಸಿ

(1) ಹರಿಶ್ಚಂದ್ರ ಕಾವ್ಯ ಸಂಗ್ರಹ (ಎ. ಆರ್. ಕೃಷ್ಣ ಶಾಸ್ತ್ರಿಗಳ ಸುಧೀರ್ಘ ಮುನ್ನುಡಿ ಇದೆ)

(2) ಶಬ್ದ ಕೋಶ ಸಂಗ್ರಹ

(3) ಕಾದಂಬರಿ ಸಂಗ್ರಹ (ಇದರ ಬಗ್ಗೆ ಒಂದು ಹೇಳಿಕೆ ಇದೆ) ಬಾಣ ಭಟ್ಟ ಮತ್ತು ನಾಗವರ್ಮರದು ಒಂದು ದಟ್ಟ ಅರಣ್ಯವಾದರೆ, ವೆಂಕಣ್ಣಯ್ಯನವರದು ಒಂದು ಸುಂದರ 'ನಂದನವನ'

(4) ಬಸವರಾಜ ದೇವರಗಳೆ (ಹರಿಹರನ ಮೂಲ ಪ್ರಾಚೀನ ಕೃತಿಯನ್ನು ಅಧ್ಯಯನ ಮಾಡಿ ತಂದದ್ದು. ಇದರ ನಂತರ ಬಸವಪುರಾಣ ಇತ್ಯಾದಿ ಬಂದಿದೆ)

ಅವರು ತೀರಿಹೋದ ಅನೇಕ ವರ್ಷದ ನಂತರ ಬಂದ ಮಹತ್ವದ ಗ್ರಂಥ 1958ರಲ್ಲಿ ಪ್ರಕಟಿಸುವಾಗ ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಇತರ ಲೇಖನಗಳು ಇದು 9 ಲೇಖನಗಳನ್ನು ಒಳಗೊಂಡಿದ್ದು ಹೊಸರೀತಿಯ ವಿಮರ್ಶೆಗೆ ಹೊಸದಾರಿಯನ್ನು ತೋರಿಸಿದುವು.

'ಕನ್ನಡ ಸಾಹಿತ್ಯ ಮತ್ತು ಚರಿತ್ರೆ !' ಇದೊಂದು ಸಾಹಿತ್ಯ ಸಂಶೋಧನಾತ್ಮಕ ಲೇಖನ ವಿದ್ವತ್ ಪೂರ್ಣವಾಗಿಯೂ, ನಿಷ್ಪಕ್ಷತೆಯಿಂದಲೂ, ಸೋಪಜ್ಞತೆಯಿಂದಲೂ ಕೂಡಿದ್ದು ಗಹನ ಸಮಸ್ಯೆಗಳನ್ನು ಆರಿಸಿ ಸ್ವಲ್ಪವೂ ಗಡಿಬಿಡಿ ಇಲ್ಲದ ನಿರೂಪಣಾವಿಧಾನ ಅವರದಾಗಿದೆ.

ಕವಿರಾಜ ಮಾರ್ಗದ ಕರ್ತೃಯಾರು? ಕನ್ನಡ ಸಾಹಿತ್ಯ ಸೃಷ್ಟಿಯ ಆದಿಯನ್ನು ಇವರು ಕ್ರಿಸ್ತಶಕ 10ಿಂದಲೇ ಗುರುತಿಸುತ್ತಾರೆ. ಜೈನಕವಿ (ಆದಿಕವಿ ಪಂಪ)ಗಳಿಗೂ ಮುಂಚೆಯೇ ಕನ್ನಡ ಸಾಹಿತ್ಯ ಸೃಷ್ಟಿಸಿದವರು. ಬ್ರಾಹ್ಮಣರು, ಬೌದ್ಧರಿರಬೇಕೆಂದು ಇವರು ಪ್ರತಿಪಾದಿಸುತ್ತಾರೆ. ಎಂ.ವಿ. ಸೀತಾರಾಮಯ್ಯನವರು ಕವಿರಾಜ ಮಾರ್ಗವನ್ನು ಶ್ರೀ ವಿಜಯ ಬರೆದದ್ದರೆಂದು ಪ್ರತಿಪಾದಿಸಿದ್ದಾರೆ.

**ಪಂಪಭಾರತ :** ವಿಕ್ರಮಾರ್ಜುನೀಯದ ಗುಣದೋಷ ಕುರಿತು ವಿಚಾರಮಾಡಿದ್ದಾರೆ 10ನೇ ಶತಮಾನದ ಸಾಹಿತ್ಯ ಚರಿತ್ರೆ.

**ಬಸವರಾಜ ದೇವರರಗಳೆ :** ಬಸವಣ್ಣನವರ ಜೀವನ ಚರಿತ್ರೆ, ವಿಶ್ಲೇಷಣೆ, ವಿಮರ್ಶೆ ಇತ್ಯಾದಿ ಇದರಲ್ಲಿ ಹದವಾದ ಶೈಲಿ, ಮುಕ್ತಮನಸ್ಸು ವೈಶಿಷ್ಟ್ಯ ಪೂರ್ಣ ದೃಷ್ಟಿಯಿಂದ ಕೂಡಿದ್ದಾಗಿದೆ.

ಬಿಜ್ಜಳ ಜೈನನೇ?

**12, 13 ನೇ ಶತಮಾನದ ಸಾಹಿತ್ಯ ಚರಿತ್ರೆ :** ಜೈನ, ವೈಷ್ಣವ, ವೀರಶೈವರ ಭೋಗಲಾಲಸೆ ಮುಂತಾದದ್ದರ ಕುರಿತಿದ್ದು.

**ಕಾದಂಬರಿ ಸಂಗ್ರಹ :** ಬಾಣಭಟ್ಟ, ನಾಗವರ್ಮರ ಕಾದಂಬರಿ ಕುರಿತದ್ದು ಕನ್ನಡ ಇಲಾಖೆಗೆ ಮತ್ತು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಧೈರ್ಯ, ಭರವಸೆ ನೀಡಿದ ವೆಂಕಣ್ಣಯ್ಯನವರು 12 ವರ್ಷ ಕೆಲಸಮಾಡಿದ ಜಾಗದಲ್ಲಿ ನಾನು ಕೆಲಸ ಮಾಡಿದೆ. ಇದೇ ನನ್ನ ಅಹೋಭಾಗ್ಯವಾಗಿದೆ. ಇಂತಹ ಪ್ರಾತಃ ಸ್ಮರಣೀಯರಾದ ವೆಂಕಣ್ಣಯ್ಯನವರು ನನಗೆ ಆದರ್ಶ ಮೂರ್ತಿಗಳು ನನ್ನಿಂದ ಯಾವುದೇ ಒಳ್ಳೆಯ ಕೆಲಸವಾಗಿದ್ದರೂ ಅದು ಅವರಿಂದಲೇ ಆದದ್ದು ಎಂದು ಬದುಕು ಬರಹ ಎಂಬ ವಿಷಯದ ಬಗ್ಗೆ ಎರಡುದಿನದ ಉಪನ್ಯಾಸ ನೀಡಿದ ಹಾ. ಮಾ. ನಾಯಕರವರು ಅಭಿಪ್ರಾಯ ವ್ಯಕ್ತಪಡಿಸಿದರು.

●

# ಹರಿದಾಸ ಸಾಹಿತ್ಯ ಭಾಗ -12

✍ ರಮಾ ಕೃಷ್ಣ

### ಮಹಿಳಾ ಕೃತಿಕಾರರು

**ಹೆಳವನಕಟ್ಟೆ ಗಿರಿಯಮ್ಮ :** ದಾಸ ಸಾಹಿತ್ಯದಲ್ಲಿ ಹೆಳವನ ಕಟ್ಟೆ ಗಿರಿಯಮ್ಮ ಪ್ರಮುಖಳು. ಈಕೆ ಧಾರವಾಡ ಜಿಲ್ಲೆಯ ರಾಣೇಬೆನ್ನೂರಿನ ಭೀಷ್ಮಪ್ಪಜೋಯಿಸರ ಮಗಳು. ಚಿಕ್ಕ ವಯಸ್ಸಿನಲ್ಲಿಯೇ ಈಕೆಗೆ ಹರಿಹರ ತಾಲ್ಲೂಕಿನ ಮಳೆಬೆನ್ನೂರಿನ ಶ್ಯಾನುಭೋಗ್ ಕೃಷ್ಣಪ್ಪನ ಮಗ ತಿಪ್ಪರಸನೊಂದಿಗೆ ಮದುವೆಯಾಯ್ತು. ಆದರೆ ಗಿರಿಯಮ್ಮ ಸಂಸಾರದಿಂದ ವಿಮುಖಳಾಗಿ ಭಗವದ್ಭಕ್ತಿಗೆ ತನ್ನ ತನುಮನವನ್ನು ಅರ್ಪಿಸಿದಳು. ಈಕೆ ಸುಮಾರು 1750ರಲ್ಲಿ ಇದ್ದಳೆಂದು ಕವಿಚರಿತೆಕಾರರು ಊಹಿಸಿದ್ದಾರೆ. ಈಕೆ ಸ್ವಯಂ ಪ್ರೇರಣೆಯಿಂದ ಹರಿದಾಸಳಾಗಿ 'ಹೆಳವನಕಟ್ಟೆ ರಂಗ' ಎಂಬ ಅಂಕಿತವನ್ನು ಗ್ರಹಿಸಿ ತನ್ನ ಕೃತಿಗಳ ರಚನೆ ಮಾಡಿದ್ದಾಳೆ. ಮತ್ತೊಂದು ಹೇಳಿಕೆ ಈಕೆ ಗೋಪಾಲದಾಸರಿಂದ ಹರಿದಾಸ ದೀಕ್ಷೆ ಪಡೆದಿದ್ದಳೆಂದೂ ಇದೆ.

ಗಿರಿಯಮ್ಮನಿಗೆ ಪರಮಾತ್ಮನಲ್ಲಿ ವಾತ್ಸಲ್ಯ ಭಕ್ತಿ ಭಗವಂತನನ್ನು ಪುತ್ರನೆಂದು ಭಾವಿಸಿ ಆ ಮಗುವನ್ನು ಲಾಲಿಸಿ ಪಾಲಿಸಿ ಆಡಿಸಿ ಮುದ್ದಿಸಿದಂತೆ ಈಕೆಯ ರಚನೆಗಳಿವೆ. ಈಕೆಯ ರಚನೆಗಳು ವೈವಿಧ್ಯ ಪೂರ್ಣದಿಂದೊಡಗೂಡಿವೆ. ಈಕೆ ಅನೇಕ ಬಿಡಿಹಾಡುಗಳಲ್ಲದೆ ಬ್ರಹ್ಮಕೊರವಂಜಿ, ಲವಕುಶಕಾಳಗ, ಉದ್ದಾಲಕನಹಾಡು, ಕೃಷ್ಣಕೊರವಂಜಿ ಮುಂತಾದ ಕಥನ ಕಾವ್ಯಗಳನ್ನೂ, ಚಂದ್ರಹಾಸ ಚರಿತ್ರೆ ಮತ್ತು ಸೀತಾ ಕಲ್ಯಾಣ ಎಂಬ ಸಾಂಗತ್ಯ ಕೃತಿಗಳನ್ನೂ ರಚಿಸಿದ್ದಾಳೆ. ಗಜೇಂದ್ರ ಮೋಕ್ಷ ಮತ್ತು ಗಿಳಿಪಾರಿಜಾತ ಎಂಬ ಕೃತಿಗಳೂ ಕೂಡ ಈಕೆಯವೆಂಬ ಹೇಳಿಕೆ ಇದೆ. ಆದರೆ ಇವು ಲಭ್ಯವಿಲ್ಲ. ಈಕೆ ಹಲವು ದೇವರ ನಾಮಗಳನ್ನು ರಚಿಸಿ ಕೀರ್ತನಕಾರರಲ್ಲಿ ಒಳ್ಳೆಯ ಹೆಸರು ಪಡೆದಿದ್ದಾಳೆ.

ಈಕೆಯ ಕೃತಿಗಳಲ್ಲಿ ಬಹುಪಾಲು ಪವಾಡಗಳಿವೆ. ಹೆಳವನಕಟ್ಟೆ ರಂಗನಾಥನ ಉತ್ಸವ ಕಾಲದಲ್ಲಿ ಉಂಗುರ ಮಾಯವಾಯಿತೆಂದೂ ಗಿರಿಯಮ್ಮ ಭಗವಂತನನ್ನು ಪ್ರಾರ್ಥಿಸಿ ಹಾಡಿದ ಕೂಡಲೆ ಗುಬ್ಬಿ ಉಂಗುರವನ್ನು ಕಚ್ಚಿ ತಂದು ಹಾಕಿತೆಂದು ಒಂದು ಹಾಡಿದ್ದರೆ. ಇನ್ನೊಂದರಲ್ಲಿ ಮಳೆ ಇಲ್ಲದೆ ಬಾಯ್ಬಿಡುತ್ತಿದ್ದ ಜನರಿಗೆ ಈಕೆ ಮಳೆತರಿಸಿದ್ದಾಗಿದೆ. ಕೆಳಕಂಡ ರಚನೆ ಗಮನಿಸಿ.

ಮಳೆಯ ದಯಮಾಡೋ ರಂಗ. ನಿಮ್ಮ
ಕರುಣೆ ತಪ್ಪಿದರೆ ಉಳಿಯದು ಲೋಕ ॥ ಪ ॥
॥ ೧ ॥ ಪಶುಜಾತಿ ಹುಲ್ಲೆಸಾರಂಗ ಮೃಗಗಳು ಬಹಳ
ಹಸಿದು ಬಾಯಾರಿ ಬತ್ತಿದ ಕೆರೆಗೆ ಬಂದು
ತೃಷೆಯಡಗದೆ ತಲ್ಲಣಿಸಿ ಮೂರ್ಛೆಯಗೊಂಡು
ದೆಸೆ ದೆಸೆಗೆ ಬಾಯ್ಬಿಡುವವಯ್ಯಾ ಹರಿಯೆ
॥ ೨ ॥ ಸಂದು ಹೋದುವು ಜೇಷ್ಠ ಆಷಾಢ ಶ್ರಾವಣ
ಬಂದಿದೆ ಭಾದ್ರಪದ ಮಾಸವೀಗ
ಇಂದು ಪುರಂದರಗೆ ಹೇಳಿ ವೃಷ್ಟಿಯ ತರಿಸೋ
ಸಂದೇಹವ್ಯಾಕೆ ಹೆಳವನ ಕಟ್ಟೆ ರಂಗ ॥ ಮಳೆ ॥

ಇದಲ್ಲದೆ ಗಿರಿಯಮ್ಮ ಭಕ್ತಿರಸ ಪೂರಿತವಾದ ಹಾಡುಗಳನ್ನೂ ಸಹ ಬರೆದಿದ್ದಾಳೆ. ಭಕ್ತವತ್ಸಲನೆಂಬ ಬಿರುದ ಬಿಡದಿರುದೇವ'' ಎಂದು ಬಿನ್ನವಿಸುತ್ತಾಳೆ. ಮತ್ತೊಂದು ಕಡೆ ಮನ ನ್ನ ಮಾತಕೇಳದು ಮಂದವೆ ಜ್ಞಾನದಿ

ತನುವಿನಾಶೆಯ ಬಿಡಲೊಲ್ಲದು ॥ ಪ ॥
ವನಜನಾಭನೆ ನಿನ್ನ ನಾಮ ಸ್ಮರಣೆ ಮಾಡದೆ
ಕಂಡ ಕಂಡೆಡೆ ಅಲೆಯುತಲಿದೆ
ಸಾಧು ಸಜ್ಜನರ ಸಂಗವಮಾಡಿ ಪರಾಗತಿ
ಆದರವನ್ನು ಮಾಡಲೊಲ್ಲದು

ಎಂದು ಮುಂತಾಗಿ ಪ್ರಾರ್ಥಿಸುತ್ತಾಳೆ. ಈಕೆಯ ಕೃಷ್ಣಕೊರವಂಜಿಯಲ್ಲಿ ಶ್ರೀ ಕೃಷ್ಣನು ಕೊರವಿಯ ವೇಷಧರಿಸಿ ಬಂದು ರುಕ್ಮಿಣಿಗೆ ಧೈರ್ಯ ತುಂಬುತ್ತಾನೆ. ರುಕ್ಮಿಣಿಯ ಅಣ್ಣ ರುಕ್ಮಿ ತನ್ನ ತಂಗಿಯನ್ನು ಜರಾಸಂಧನಿಗೆ ಕೊಡಬೇಕೆಂದು ಯೋಚಿಸುತ್ತಾನೆ. ಆಗ ಕೃಷ್ಣ ಕೊರವಂಜಿಯಾಗಿ ಬಂದು ರುಕ್ಮಿಣಿಗೆ ನಿನ್ನ ಮನ ದೀಷ್ಟ ನೆರವೇರುವುದೆಂದು ಕಣಿ ಹೇಳುತ್ತಾನೆ.

ಬ್ರಹ್ಮ ಕೊರವಂಜಿಕೂಡ ಕೃಷ್ಣ ಕೊರವಂಜಿಯನ್ನೇ ಹೋಲುತ್ತದೆ. ಇದರಲ್ಲಿ ದೇವಕಿಯ ಗರ್ಭದಲ್ಲಿ ಹುಟ್ಟುವವನು ಭಗವಂತನೆಂದು ಹೇಳಲು ಬ್ರಹ್ಮಕೊರವಂಜಿಯಾಗಿ ಬರುತ್ತಾನೆ. ದೇವಕಿಗೆ ಧೈರ್ಯ ಹೇಳುತ್ತಾನೆ.

ಈಕೆಯ ಲವಕುಶರ ಕಾಳಗ ಒಂದು ಹೊಸ ಕತೆಯನ್ನೊಳಗೊಂಡಿದೆ. ಶೂರ್ಪನಖಿ ಕೊರವಂಜಿಯಾಗಿ ಬಂದು ಗರ್ಭಿಣಿ ಸೀತೆಯನ್ನು ರಾವಣನ ಚಿತ್ರ ಬರೆಯುವಂತೆ ಪುಸಲಾಯಿಸಿ ಸೀತೆಗೆ ಇಷ್ಟವಿಲ್ಲದಿದ್ದರೂ ಬರೆಸುತ್ತಾಳೆ. ಸೀತೆ ತಾನು ನೋಡಿರುವುದು ಬರೀ ರಾವಣನ ಪಾದವೆಂದು ಪಾದ ಬರೆಯುತ್ತಾಳೆ. ಮಿಕ್ಕೆಲ್ಲಾ ಭಾಗ ತಾನೇ ಬರೆದು ಕೊರವಿ (ಶೂರ್ಪನಖಿ) ಜೀವ ತುಂಬುತ್ತಾಳೆ. ಆಗ ಆ ಚಿತ್ರ ರಾವಣನಾಗಿ ಕುಣಿಯುತ್ತದೆ. ಕುಪಿತನಾದ ರಾಮ ಸೀತೆಯನ್ನು ಕಾಡಿಗಟ್ಟುತ್ತಾನೆ. ಇದೊಂದು ಜಾನಪದ ಮೂಲದ ಕಥೆ.

**ಉದ್ದಾಲಕ ಹಾಡು :** ಇದರಲ್ಲಿ 447 ಪದ್ಯಗಳಿದ್ದು ಇದೊಂದು ನೂತನ ಕಥಾನಕವಾಗಿದೆ.

ಶಂಕರ ಗಂಡನ ಹಾಡು. ಈಶ್ವರನನ್ನು ಕುರಿತು ವೈಷ್ಣವ ಕವಯತ್ರಿಯ ಈ ರಚನೆ ಈಕೆಯ ಪರಮತ ಸಹಿಷ್ಣುತೆಯ ಕುರುಹಾಗಿದೆ. ಈ ಕಾವ್ಯದಲ್ಲಿ ರತಿ ಶಿವನ ತಂಗಿ. ತಂಗಿಯನ್ನು ನೋಡಲು ಶಿವ ಬಂದಾಗ ರೂಪ ಮದದಿಂದ ಮನ್ಮಥ ಶಿವನನ್ನು ಹಾಸ್ಯ ಮಾಡುತ್ತಾನೆ. ಶಿವ ಅವನ ಗರ್ವಭಂಗ ಮಾಡುವುದೇ ಕಥಾವಸ್ತು.

ಈಕೆಯ ಚಂದ್ರಹಾಸನಕಥೆಗೆ ಹಿನ್ನೆಲೆ ಲಕ್ಷ್ಮೀಶಕವಿಯ ಜೈಮಿನಿ ಭಾರತ. ಈ ಕೃತಿಯಲ್ಲಿ ಸ್ತ್ರೀಸಹಜವಾದ ಅನುಕಂಪ ಕರುಣಾಜನಕ ಸನ್ನಿವೇಶಗಳಲ್ಲಿ ಉಕ್ಕಿ ಹರಿದಿದೆ. ರಾಜಕುಮಾರನಾಗಿ ತಂದೆ ತಾಯಿಗಳನ್ನು ಕಳೆದುಕೊಂಡು ಅನಾಥನಾದ ಚಂದ್ರಹಾಸನನ್ನು ಸಾಕುತ್ತಿದ್ದ ದಾಸಿ ಹೇಳುವ ಮಾತುಗಳಿವು.

''ದೇಶಾಧಿಪತಿಯ ಗರ್ಭದಿ ಬಂದು ನಿನಗೀಗ
ಹಾಸುವ ವಸ್ತ್ರಗಳಿಲ್ಲ
ಬೀಸಿ ತೂಗುವರೇ ತೊಟ್ಟಿಲುಯಿಲ್ಲ ಎನುತಲಿ
ಬೇಸತ್ತು ಅಳಲು ವಳೊಮ್ಮೆ.

ಗಿರಿಯಮ್ಮನ ಹರಿಭಕ್ತಿ ಕಾವ್ಯದುದ್ದಕ್ಕೂ ವ್ಯಕ್ತವಾಗುತ್ತದೆ. ಇದಲ್ಲದೆ ಸೀತಾ ಕಲ್ಯಾಣ 87 ಪದ್ಯಗಳಿಂದ ಕೂಡಿದ್ದು ಸೀತಾರಾಮ ಕಲ್ಯಾಣದ ವರ್ಣನೆ ಮುಖ್ಯೋದ್ದೇಶವಾಗಿದ್ದರೂ ಇದರಲ್ಲಿ ಅರಿಶಿನೆಣ್ಣೆಯ ಸಂಭ್ರಮವೇ ಹೆಚ್ಚಾಗಿದೆ. ಈಕೆಯ ರಚನೆ ಸರಳವೂ ಹಾಗೂ ಸುಲಭವೂ ಆದ ಶೈಲಿ, ಭಕ್ತಿಯ ತೀವ್ರತೆ, ಸಮಕಾಲೀನ ಕಾಲದ ಆಚಾರ ವಿಚಾರಗಳು ನಂಬಿಕೆ ಪದ್ಧತಿಗಳು ಸಮಾವೇಶಗೊಂಡಿದೆಯೇ ವಿನಃ ವಿದ್ವತ್ ಪ್ರದರ್ಶನವಿಲ್ಲ. ಈಕೆಯ ಕಾವ್ಯಗಳಲ್ಲಿ ನೇರ ನಿರೂಪಣೆ ಸ್ವಾರಸ್ಯಕರ ಸಂಭಾಷಣೆಗಳಿವೆ. ಹೃದಯವಂತಿಕೆ ಮತ್ತು ಸಾಮಾಜಿಕ ಪ್ರಜ್ಞೆ ಇರುವ ಈಕೆ ವೈಷ್ಣವ ಭಕ್ತಿ ಪಂಥದಲ್ಲಿ ಕೃತಿಕಾರರಲ್ಲಿ ಪ್ರಮುಖಳೆನಿಸಿದ್ದಾಳೆ.

**ಗಲಗಲಿ ಅವ್ವ :** ಈಕೆ ಬಿಜಾಪುರದ ಜಿಲ್ಲೆಯ ತೊಂಭತ್ತು ವರ್ಷದ ವೃದ್ಧ ಮುದ್ಗಲಾಚಾರ್ಯ

ಎಂಬುವರನ್ನು ತನ್ನ 12ನೇ ವಯಸ್ಸಲ್ಲಿ ವಿವಾಹವಾಗಿ ಮದುವೆಯಾದ ಎಂಟನೇದಿನವೇ ವಿಧವೆಯಾದವಳು. ಅವಿದ್ಯಾವಂತೆಯಾದ ಈಕೆಗೆ ಅವಳ ಮಲಮಕ್ಕಳೇ ಪಾಠ ಪ್ರವಚನ ಹೇಳಿದರು. ದೊಡ್ಡ ಪಂಡಿತರನ್ನೂ ಚಕಿತಗೊಳಿಸುವಷ್ಟು ಪಾಂಡಿತ್ಯ ಈಕೆಯದಾಯ್ತು. ಈಕೆ ತನ್ನ ಶಿಷ್ಯರೊಂದಿಗೆ, ಮೈಸೂರಿಗೆ ಹೋಗಿ ಅರಸರಿಂದ ಸನ್ಮಾನಿಸಲ್ಪಟ್ಟಳೆಂದು ಹೇಳಿಕೆ ಇದ್ದರೂ, ಸಂಶೋಧಕರು ಸತ್ಯಾಂಶದ ಬಗ್ಗೆ ಸಂಶಯಿಸಿದ್ದಾರೆ.

ಈಕೆ ಮದುವೆಗಳಲ್ಲಿ ಹಾಡುವ ಮುಯ್ಯದ ಹಾಡು ಬೀಗರ ಹಾಡುಗಳು ಮುಂತಾದುವನ್ನು 'ಶ್ರೀ ರಾಮೇಶ' ಎಂಬ ಮುದ್ರಿಕೆಯಿಂದ ರಚಿಸಿದ್ದಾಳೆ. ಈಕೆಯ ಹಾಡುಗಳೂ ಕೂಡ ರಾಮಾವತಾರ ಕೃಷ್ಣಾವತಾರದ ಸನ್ನಿವೇಶಗಳನ್ನೊಳಗೊಂಡಿವೆ. ಮುಯ್ಯದಹಾಡು ತುಂಬಾ ಪ್ರಚಾರದಲ್ಲಿರುವ ಸುದೀರ್ಘ ಗೀತೆ. ಗೌರೀ ಪೂಜೆಯ ಸನ್ನಿವೇಶದಲ್ಲಿ ಮುಯ್ಯ ಒಯ್ಯುವ ಸಂಪ್ರದಾಯವನ್ನು ವಿನೋದವಾಗಿ ಹಾಡಿ ನರ್ತಿಸಿ ಆಚರಿಸುವ ಸಂದರ್ಭವಿದು. ಸುಭದ್ರೆ ದ್ರೌಪದಿಯರು ರುಕ್ಮಿಣಿಗೆ ಮುಯ್ಯ ಒಯ್ಯುವಂತೆ ಈ ಹಾಡು ರಚಿತವಾಗಿದೆ. ಮುಯ್ಯದವಾದದಲ್ಲಿ ತನ್ನನ್ನು ಗೆಲ್ಲ ಬೇಕೆಂದು ಕವಯತ್ರಿ ವರ್ಣಿಸಿದ್ದಾಳೆ. ರುಕ್ಮಿಣಿ ಸತ್ಯಭಾಮೆಯರ ಜಗಳದಲ್ಲಿ ಕೃಷ್ಣನಿಗುಂಟಾದ ಸ್ಥಿತಿಯನ್ನು ದ್ರೌಪದಿ ಸೊಗಸಾಗಿ ವರ್ಣಿಸುತ್ತಾಳೆ. ಇದೇ ಸಂದರ್ಭವನ್ನು ದಶಾವತಾರದ ವರ್ಣನೆಗೂ ಉಪಯೋಗಿಸಿಕೊಂಡಿದ್ದಾರೆ.

ತಮ್ಮ ಹಾಡುಗಳಲ್ಲಿ ಹರಿಕಥಾಮೃತಸಾರದಲ್ಲಿ ವಿವರಿಸಲಾಗಿರುವ ತಾರತಮ್ಯ ಪ್ರಕಾರ ಕಾಮ ಕ್ರೋದಗಳನ್ನು ತೊರೆದು ಪವಿತ್ರಜ್ಞಾನ ಪಡೆಯುವುದೇ ಎಲ್ಲಾ ಆಭರಣಗಳನ್ನು ಧರಿಸಿದಂತೆ ಎಂಬುದು ಈ ಕೃತಿಯಲ್ಲಿ ವ್ಯಕ್ತವಾಗಿರುವ ಮುಖ್ಯ ವಿಷಯ. ಬೀಗರ ಹಾಡುಗಳು, ವೋರೆಗೆ ನೀರು ತಂದ ಹಾಡು. ರಾಮಾವತಾರ, ಕೃಷ್ಣಾವತಾರದ ಸಂದರ್ಭಗಳನ್ನು ಉಪಯೋಗಿಸಿಕೊಂಡು ಈ ಹಾಡುಗಳನ್ನು ರಚಿಸಿದ್ದಾರೆ. ಗಲಗಲಿ ಅವ್ವ ಆಡುನುಡಿಗೆ ಹೆಚ್ಚು ಪ್ರಾಧಾನ್ಯಕೊಟ್ಟು ಅಲಂಕಾರಗಳಿಂದ ವ್ಯಂಗ್ಯದಿಂದ ವಿಸ್ತಾರವಾದ ವರ್ಣನೆಗಳಿಂದ ಕೃತಿಗಳನ್ನು ರಚಿಸಿದ್ದಾರೆ. ಸಜ್ಜನರ ಸಂಗ ಸರ್ವವಿಧದಲ್ಲೂ ಶ್ರೇಷ್ಠ ಎಂದು ತಮ್ಮ ಕೃತಿಗಳ ಮೂಲಕ ಸಾರಿದ್ದಾರೆ.

ಹರಪನಹಳ್ಳಿ ಭೀಮವ್ವ : ದಾಸಸಾಹಿತ್ಯದ ಪ್ರಮುಖ ಕವಯತ್ರಿರಲ್ಲಿ ಈಕೆ ಪ್ರಮುಖಳು. ಈಕೆ ಹೊಸಪೇಟೆ ತಾಲ್ಲೂಕಿನ ನಾರಾಯಣ ದೇವರ ಕೆರೆಯಲ್ಲಿ ಜನಿಸಿದಳು. ತನ್ನ 11ನೇ ವಯಸ್ಸಿಗೆ 45 ವಯಸ್ಸಿನ ಮುನಿಯಪ್ಪನೆಂಬಾತನಿಗೆ 3ನೇ ಹೆಂಡತಿಯಾದಳು. ತನ್ನ 35ನೇ ವಯಸ್ಸಿನಲ್ಲಿ ವಿಧವೆಯಾದಳು. ಅನಕ್ಷರಸ್ಥೆಯಾದ ಈಕೆಗೆ ದೈವಕೃಪೆಯಿಂದ ಕವಿತಾಸಾಮರ್ಥ್ಯ ಉಂಟಾಯಿತಂತೆ. ಈಕೆ 'ಭೀಮೇಶಕೃಷ್ಣ' ಎಂಬ ಅಂಕಿತದಿಂದ ತಮ್ಮ ಕೃತಿಗಳನ್ನು ರಚಿಸಿದ್ದಾರೆ. ಭೀಮವ್ವ 143 ಬಿಡಿ ಹಾಡುಗಳನ್ನು ರಚಿಸಿರುವುದೇ ಅಲ್ಲದೆ, ನಳಚರಿತ್ರೆ ಮುಯ್ಯದ ಹಾಡುಗಳು 'ಪತಿದಾನ ಕೊಟ್ಟಹಾಡು' ಮಂತಾದ ದೊಡ್ಡ ಹಾಡುಗಳನ್ನೂ ಸಹ ರಚಿಸಿದ್ದಾರೆ.

ನಳಚರಿತ್ರೆಯಲ್ಲಿ ಜೂಜಿನಲ್ಲಿ ಸೋತನಳ ದಮಯಂತಿಯೊಡನೆ ಕಾಡಿಗೆ ಹೋಗುತ್ತಾನೆ. ದಮಯಂತಿಯನ್ನು ತೌರಿಗೆ ಕಳಿಸುವ ಅವನ ಯತ್ನ ವಿಫಲವಾದಾಗ, ಅವಳನ್ನು ಕಾಡಿನಲ್ಲಿ ಬಿಟ್ಟು ಹೋಗುತ್ತಾನೆ. ಹಾಗೆ ಬಿಟ್ಟು ಹೋಗುವಾಗಿನ ಅವನ ಮನಸ್ಸಿನ ಡೋಲಾಯಮಾನ ಸ್ಥಿತಿಯನ್ನು ಭೀಮವ್ವ ಮನೋಜ್ಞವಾಗಿ ಚಿತ್ರಿಸಿದ್ದಾರೆ. 'ಅತ್ತ ಹೋಗುವನು ಇತ್ತ ಬರುವೋನೂ ಭರದಿಂದ ಕೋಮಲಾಂಗಿ ತೊಟ್ಟಿಲ ತೂಗುವಂದದಿ ತಿರುಗಾಡಿದಾ..... ರತಿಕಲ್ಯಾಣದಲ್ಲಿ ದ್ರೌಪದಿ ಹಾಗೂ ಕೃಷ್ಣನಿಗೆ ಪ್ರಾಶಸ್ತ್ಯ ಕೊಟ್ಟಿದ್ದಾರೆ.... ನಳ ಚರಿತ್ರೆ ಮಹಾಭಾರತದ ನಳೋಪಾಖ್ಯಾನದಿಂದ ಆಯ್ದು ಕಥೆ.

'ಶಕುಂತಲೆ ದುಶ್ಯಂತರಹಾಡು' ಇದೂ ಕೂಡ ಮಹಾಭಾರತದಿಂದ ಆಯ್ದು ಕಥೆ. 'ಸುಭದ್ರಾ ಕಲ್ಯಾಣ' ಶ್ರೀ ಕೃಷ್ಣನ ದಯದಿಂದ ನಡೆವ ಇನ್ನೊಂದು ಕಥೆ, 'ಪತಿದಾನಕೊಟ್ಟ ಹಾಡು' ಇದರಲ್ಲಿ ತುಳಸಿಯ ಶ್ರೇಷ್ಠತೆ, ರುಕ್ಮಿಣಿಯ ಮಹಿಮೆ ' ಮುಂತಾದ ಚಿತ್ರಣವಿದೆ. ಭೀಮವ್ವನ ಕೃತಿಗಳು ಕಥನಕಲೆ ಮತ್ತು ವರ್ಣನಾ ನೈಪುಣ್ಯದಿಂದ ಕೂಡಿದ್ದು ಸಾಮಾನ್ಯ ಜನರನ್ನು ಆಕರ್ಷಿಸುತ್ತದೆ.

ಡಾ. ಸರೋಜಿನಿ ಮಹಿಷಿಯವರು ಇನ್ನೂ ಅನೇಕ ಮಹಿಳಾ ಕವಯತ್ರಿಯರನ್ನು ಗುರುತಿಸಿದ್ದಾರೆ. ಚೆಲ್ಲಮ್ಮ, ಗಣಪಕ್ಕ, ಸುಂದರಾಬಾಯಿ ಪನ್ನಿ ಲಕ್ಷ್ಮೀಬಾಯಿ, ಶಾಂತಿಬಾಯಿ, ಓರಬಾಯಿ, ಲಕ್ಷ್ಮೀದೇವಮ್ಮ ಮುಂತಾದವರು ಇವರೆಲ್ಲರಿಗೂ ದಾಸದೀಕ್ಷೆಯಾಗಲೀ ಅಂಕಿತದೊರೆತದ್ದಾಗಲೀ ಎಲ್ಲೂ ಕಂಡುಬಂದಿಲ್ಲ. ಇವರುಗಳಲ್ಲಿ ಕಂಡುಬರುವ ಏಕತಾನತೆಯೆಂದರೆ ಕೃಷ್ಣಭಕ್ತಿ ಅದು ಹರಿದಾಸರುಗಳ ಪ್ರಭಾವದಿಂದಿರಬಹುದು.

ವಿಜಯದಾಸರಿಂದ ಬಲಗೊಂಡ ದಾಸಕೂಟದಲ್ಲಿ ಹಲವಾರು ಪರಂಪರೆ ಬಂದವು. ಜಗನ್ನಾಥದಾಸರ ಶಿಷ್ಯ ಪರಂಪರೆಯಲ್ಲಿ ಬರುವ ಯೋಗೇಂದ್ರಪ್ಪ (ಪ್ರಾಣೇಶ ವಿಠ್ಠಲ) ಮತ್ತು ಸುರಪುರದ ಪ್ರೇಮದಾಸರು (ಅಭಿನವ ಜನಾರ್ಧನ ವಿಠ್ಠಲ) ಹರಿದಾಸ ಪ್ರಪಂಚದಲ್ಲಿ ಹೆಸರು ಮಾಡಿದ್ದಾರೆ. ಯೋಗೀಂದ್ರಪ್ಪನು ಬಹಳ ಬಡತನದಲ್ಲಿದ್ದು ತೊನ್ನು ಹಿಡಿದು ಸಂಕಟ ಪಡುತ್ತಿದ್ದಾಗ ಜಗನ್ನಾಥ ದಾಸರು ಈತನ ಮೇಲೆ ಕೃಪೆಮಾಡಿ ಅಂಕಿತವಿತ್ತು ಶಾಸ್ತ್ರಾಭ್ಯಾಸಕ್ಕೆ ವ್ಯವಸ್ಥೆ ಮಾಡಿದರಂತೆ. ರಾಘವೇಂದ್ರಮಠದ ವರದೇಂದ್ರ ಸ್ವಾಮಿಗಳು ಲಿಂಗಸೂರಿಗೆ ಬಂದಾಗ ಇವರನ್ನು ಅನುಗ್ರಹಿಸಿದರಂತೆ, ಇವರು ಸಂಸ್ಕೃತದಲ್ಲಿ ಹಲವಾರು ಪ್ರೌಢವಾದ ಶಾಸ್ತ್ರಗ್ರಂಥಗಳನ್ನೂ, ಕನ್ನಡದಲ್ಲಿ 16 ಪದ್ಯಗಳನ್ನೂ ಬರೆದಿದ್ದಾರೆ. ಇಷ್ಟೇಲ್ಲದೆ 53 ಪದಗಳನ್ನೂ 3 ಸೂಳಾದಿಗಳನ್ನೂ ಎರಡು ಉಗಾ ಭೋಗಗಳನ್ನೂ ರಚಿಸಿದ್ದಾರೆ. ಇವರು 1822ರಲ್ಲಿ ದೈವಾಧೀನರಾಗಿದ್ದಾರೆ. ಇವರ ಮೊಮ್ಮಗ ರಾಮದಾಸರೆಂಬುವರು ತಮ್ಮ ಸೋದರ ಮಾವನಿಂದ ಅಂಕಿತ ಪಡೆದು ಪ್ರಾಣೇಶ ವಿಠ್ಠಲನೆಂಬೊ ಅಂಕಿತದಿಂದ 24 ಪದಗಳನ್ನು ರಚಿಸಿ ಹಲವಾರು ಶಿಷ್ಯರನ್ನು ಸಂಗ್ರಹಿಸಿ 1890ರಲ್ಲಿ ಸ್ವರ್ಗಸ್ಥರಾಗಿದ್ದಾರೆ. ಇವರ ಪರಂಪರೆ ಇಂದಿನವರೆಗೆ ನಡೆದು ಬಂದಿದೆ ಎನ್ನುತ್ತಾರೆ.

ಜಗನ್ನಾಥದಾಸರ ಇನ್ನೊಬ್ಬ ಶಿಷ್ಯರಾಗಿದ್ದ ಪ್ರೇಮದಾಸರು ಬಾಲ್ಯದಿಂದ ಹೆಳವರಾಗಿದ್ದು ರಾಘವೇಂದ್ರ ಸ್ವಾಮಿಗಳನ್ನು ಸೇವಿಸಿ ಸ್ವಸ್ಥರಾದರಂತೆ. ಇವರು 'ಅಭಿನವ ಜನಾರ್ಧನ ವಿಠ್ಠಲ' ವೆಂಬ ಅಂಕಿತದಿಂದ 82 ಪದಗಳನ್ನೂ 9 ಸೂಳಾದಿಗಳನ್ನೂ ರಚಿಸಿದ್ದಾರೆ. ರಾಘವೇಂದ್ರ ಸ್ವಾಮಿಗಳ ಮೇಲಿನ ಇವರ ರಚನೆಗಳನ್ನು ಇನ್ನೂ ಮನೆಮನೆಗಳಲ್ಲಿ ಹಾಡುತ್ತಾರೆ. ಇವರಕಾಲ ಸುಮಾರು 1825 ಎಂದು ತಿಳಿಯುತ್ತದೆ. ಇವರ ಶಿಷ್ಯ ಪರಂಪರೆಯಲ್ಲಿ ಬಂದ ಸುಬ್ಬರಾಯದಾಸರು (ಗುರುರಾಮ ವಿಠ್ಠಲ) ಇವರು ಸುಮಾರು ವರ್ಷಗಳ 50 ಹಿಂದೆ ಪ್ರಸಿದ್ಧರಾಗಿದ್ದರಂತೆ.

ಸಾಂಪ್ರದಾಯಿಕವಾಗಿ ಗುರುಗಳಿಂದ ಅಂಕಿತ ಪಡೆದು ಹರಿದಾಸರೆನ್ನಿಸಿಕೊಳ್ಳುವುದು ಸಾಧಾರಣ ನಿಯಮ. ಅದಕ್ಕೆ ವ್ಯತಿರಿಕ್ತವಾಗಿ ಅಂತರ್ ಪ್ರೇರಣೆಯಿಂದ ಅಂಕಿತವನ್ನು ತಾವೇ ಗ್ರಹಿಸಿದವರೂ ಉಂಟು. ವಿಜಯದಾಸರಿಗೂ ಗುರುಗಳಿಂದ ದಾಸದೀಕ್ಷೆ ದೊರೆತಿರಲಿಲ್ಲ. ಹೆಳವನಕಟ್ಟೆ

ಗಿರಿಯಮ್ಮನಿಗೂ ದಾಸದೀಕ್ಷೆ ಯಾಗಿರಲಿಲ್ಲ. ಉಡುಪಿಯ ಪೆರಂಪಳ್ಳಿಯವರಾದ 'ನೆಕ್ಕಾರೆ ಕೃಷ್ಣರಾಯ'ನೆಂಬ ಕವಿ ಗಿರಿಯಮ್ಮನ ಸಮಕಾಲೀನರು. ಇವರು ಮನೋಜ್ಞವಾಗಿ ಬರೆಯಬಲ್ಲವರಾಗಿಯೂ, ಮಧುರವಾಗಿ ಹಾಡಬಲ್ಲವರಾಗಿಯೂ ಇದ್ದರು. ಇವರಿಗೂ ಅಂಕಿತದೊರೆತಿರಲಿಲ್ಲ. ಈತ ತಿರುಪತಿಯ ವರಾಹಸ್ವಾಮಿಯ ಮತ್ತು ವೆಂಕಟೇಶ್ವರನ ಭಕ್ತರಾಗಿದ್ದು ಇವರು 'ವರಾಹತಿಮ್ಮಪ್ಪ'ನೆಂಬ ಅಂಕಿತವನ್ನು ಗ್ರಹಿಸಿ ಹಲವಾರು ಕೀರ್ತನೆಗಳನ್ನು ರಚಿಸಿದ್ದಾರೆ. ನಾಲ್ಕು ಸಂಧಿಗಳಲ್ಲಿ ಉಡುಪಿಯ ಕೃಷ್ಣನ ಚರಿತ್ರೆ ಸಾಂಗತ್ಯ ಶೈಲಿಯಲ್ಲಿರುವುದು ಇವರದೇ ಕೃತಿಯಾಗಿದೆ. ಕದರ ಮಂಡಲಗಿ ದಾಸರೆಂದು ಪ್ರಸಿದ್ಧರಾದ ಹಿರೇ ಭೀಮಾಚಾರ್ಯರು ಕೂಡಾ ಈ ಕಾಲದಲ್ಲೇ ಇದ್ದವರು. ಇವರು ಮುಂಚಿನ ಮೈಸೂರು ಸೀಮೆಯ ಹರಿಹರದವರಾದರೂ ಧಾರವಾಡ ಪ್ರಾಂತ್ಯದ ಕದರಮಂಡಲಗಿಯಲ್ಲಿ ನೆಲೆಸಿ ಅಲ್ಲಿನ ಹನುಮಂತದೇವರ ಪೂಜೆಯಿಂದ ಪ್ರಶಸ್ತಿಗಳಿಸಿದರು. ಈ ಹನುಮಂತನ ಸ್ಫೂರ್ತಿಯಿಂದಲೇ ಹಲವಾರು ಪದಗಳನ್ನು ರಚಿಸಿದರು. ಕದರಮಂಡಲಗಿ ಹನುಮಂತನಿಂದಲೇ ಸ್ಫೂರ್ತಿ ಪಡೆದ ಇನ್ನೊಬ್ಬ ಪ್ರಸಿದ್ಧ ದಾಸರೆಂದರೆ ಶೀನಪ್ಪದಾಸರು. 1860ರ ಸುಮಾರಿಗೆ ಜೀವಿಸಿದ್ದರು. 'ಕದರ ಮಂಡಲಗಿಯ ಶ್ರೀಪಾಂಡುರಂಗ' ಎಂಬ ಅಂಕಿತದಿಂದ ಹಲವಾರು ಕೃತಿ ರಚನೆ ಮಾಡಿದ್ದಾರೆ.

1790ರ ಸುಮಾರಿಗಿದ್ದ ಏರಿಶೇಷಾಚಾರ್ಯರು ಕೋಲಾರ ಜಿಲ್ಲೆಯ ಚಿಂತಾಮಣಿಯವರು ಇವರು 'ಏರಿವೆಂಕಟೇಶಾ' ಎಂಬ ಅಂಕಿತದಲ್ಲಿ ರಚಿಸಿರುವ 'ಶ್ರೀನಿವಾಸ ಕಲ್ಯಾಣ'ವೆಂಬ ಕನ್ನಡದ ಚಂಪೂ ಗ್ರಂಥ ಇಂದಿಗೂ ಮಾಧ್ವರ ಮನೆಗಳಲ್ಲಿ ಹಾಡುವ ವಾಡಿಕೆ ಇದೆ. ಇವರಿಗೂ ಸಂಪ್ರದಾಯವಾಗಿ ದಾಸದೀಕ್ಷೆ ಯಾಗಿರಲಿಲ್ಲ.

ಜೀವಂತರಾದ ಯಾವ ಗುರುಗಳಿಂದಲೂ ಹರಿದಾಸದೀಕ್ಷೆಯಾಗದೆ ಕನಸಿನಲ್ಲಿ ಹಿಂದಿನ ಹರಿದಾಸರೊಬ್ಬರು ಕಾಣಿಸಿಕೊಂಡು ಅಂಕಿತಕೊಡುವ ಉಲ್ಲೇಖ ಬಹಳ ಉಂಟು. ವಿಜಯದಾಸರಿಗೆ ಪ್ರತ್ಯಕ್ಷ ಗುರು ಇರಲಿಲ್ಲವಷ್ಟೆ. ಪುರಂದರದಾಸರು ಸ್ವಪ್ನದಲ್ಲಿ ಅಂಕಿತವಿತ್ತರು. ಹೀಗೆಯೇ 1860ರ ಸುಮಾರಿನಲ್ಲಿದ್ದ ಚಿನ್ನಪಳ್ಳಿ ಶೇಷದಾಸರಿಗೆ ವಿಜಯದಾಸರು ಸ್ವಪ್ನದಲ್ಲಿ ದರ್ಶನಕೊಟ್ಟು 'ಗುರುವಿಜಯ ವಿಠ್ಠಲ' ಎಂಬ ಅಂಕಿತವಿತ್ತರಂತೆ ಮೊದಲುಕಲ್ಲು ಶೇಷಪ್ಪನವರಿಗೆ ವಿಜಯದಾಸರೇ ಕನಸಿನಲ್ಲಿ ದೀಕ್ಷೆಕೊಟ್ಟರೆಂದು ಈ ಹಿಂದೆಯೇ ಹೇಳಿದೆ. ಐಹೊಳೆಯ ವೆಂಕಟದಾಸರೆಂಬುವರಿಗೂ ಸ್ವಪ್ನದಲ್ಲೇ ಅಂಕಿತವಾಯ್ತಂತೆ.

ಹೀಗೆ ವಿಜಯದಾಸರಿಂದ ಬಲಗೊಂಡ ದಾಸಕೂಟದಲ್ಲಿ ಹಲವಾರು ಪರಂಪರೆ ಬಂದುವು. ಹರಿದಾಸ ಪ್ರವಾಹದ ಹೊನಲಿನಲ್ಲಿ ಉತ್ತಮ ವ್ಯಕ್ತಿಗಳು. ಉತ್ತಮವಾದ ಕೃತಿರಚನೆ ಮಾಡಿದರು. ಕನ್ನಡದೇಶದಲ್ಲಿ ನೂರಾರು ಮಂದಿ ಭಕ್ತರು, ಭಾವುಕರು, ಭಾಗವತರು, ವಾಗ್ಗೇಯಕಾರರು ಹರಿದಾಸ ಪಂಥದ ಆಸರೆಯಿಂದ ಕಾಣಿಸಿಕೊಂಡರು. ಇವರೆಲ್ಲರ ವಿವರಗಳೂ, ಉಪಲಬ್ಧವಿಲ್ಲವಾಗಿ ಮೇಲಿನಪಟ್ಟಿ ಸಮಗ್ರವಾಗುವುದಿಲ್ಲ. ಲಿಂಗಸೂರಿನ ವರದೇಂದ್ರ ಸಾಹಿತ್ಯ ಮಂಡಲದವರು ಸುಮಾರು ಮುನ್ನೂರತೊಂಭತ್ತು ಹರಿದಾಸರ ಪಟ್ಟಿಯನ್ನು ಸಿದ್ಧಮಾಡಿ ಅದರಲ್ಲಿ ಹಲವರ ವಿವರಗಳನ್ನು ಸಂಗ್ರಹಿಸಿದ್ದಾರೆ.

**ದಾಸಸಾಹಿತ್ಯ ಹಾಗೂ ವಚನ ಸಾಹಿತ್ಯ :** ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ಅವಲೋಕಿಸಿದರೆ ಎರಡು ನವೋದಯ ಚಳುವಳಿಯನ್ನು ಕಾಣುತ್ತೇವೆ. ಮೊದಲಿನದು ಶಿವಶರಣರು 12ನೇ ಶತಮಾನದಲ್ಲಿ ಘಟಿಸಿದ್ದು, ಇನ್ನೊಂದು ಹರಿದಾಸರು 15.16ನೇ ಶತಮಾನಗಳಲ್ಲಿ ಘಟಿಸಿದ್ದು ಹರಿದಾಸ ಸಾಹಿತ್ಯ ಉಗಮ, ಕಾರಣ ಕಥಾನಕಗಳನ್ನು ಈಗಾಗಲೇ ಹೇಳಿದ್ದೇನೆ.

ಭಾರತದ ಇತಿಹಾಸವನ್ನು ಗಮನಿಸಿದಾಗ ಧರ್ಮ ಸಂಘರ್ಷ ನಿರಂತರವಾಗಿ ನಡೆದಿರುವುದು ಗಮನಕ್ಕೆ ಬರುತ್ತದೆ. ಇದು ವೇದೋಪನಿಷತ್ತುಗಳ ಕಾಲದಿಂದಲೇ ನಡೆದುಬಂದಿದೆ. ಕ್ರಿಸ್ತ ಪೂರ್ವ 6ನೇ ಶತಮಾನದಲ್ಲಿ ಹುಟ್ಟಿದ ಬೌದ್ಧ ಜೈನ ಧರ್ಮಗಳೊಂದಿಗೆ ವೈದಿಕ ಧರ್ಮದ ಹೋರಾಟ, ನಿರಂತರವಾಗಿ ನಡೆದಿದೆ. ಶೈವ, ವೈಷ್ಣವ, ಶಾಕ್ತಎಂಬ ಒಳಜಗಳ ಏನೇ ಇರಲಿ ಈ ಜಗಳದ ಸಂದರ್ಭವನ್ನು ಉಪಯೋಗಿಸಿಕೊಂಡು ಅನ್ಯಧರ್ಮ ತನ್ನ ಬೇರುಗಳನ್ನು ಭದ್ರಗೊಳಿಸಿಕೊಳ್ಳದಂತೆ ತಡೆದು ಹಿಂದೂ ಧರ್ಮವನ್ನು ಎತ್ತಿಹಿಡಿದಿದ್ದಲ್ಲದೆ, ಇಡೀ ಭಾರತದಲ್ಲಿ ಸಂಚರಿಸಿ ಎಲ್ಲ ಸಾಧು ಸಂತರು, ಸನ್ಯಾಸಿಗಳನ್ನು ಒಂದು ಕಟ್ಟಿಗೊಳಪಡಿಸಿ ದಶನಾಮೀ ಸನ್ಯಾಸಿಗಳನ್ನು ಸಂಘಟಿಸಿದವರು ಆಚಾರ್ಯ ಶಂಕರರು (ಭಾರತಿ, ತೀರ್ಥ ಸರಸ್ವತಿ ಇತ್ಯಾದಿ) ಇದರ ಜೊತೆಗೆ ಗಾಣಾಪತ್ಯರು (ಗಣಪತಿಪೂಜಕರು) ಶಾಕ್ತೇಯರು (ಶಕ್ತಿ, ದೇವಿ) ವಿಷ್ಣು, ಶಿವ, ಆದಿತ್ಯ ಪೂಜಕರನ್ನು ಒಂದುಗೂಡಿಸಿ ಪಂಚಾಯತನ ಪೂಜೆಯನ್ನು ಜಾರಿಗೆತಂದು ಹಿಂದೂಧರ್ಮವನ್ನು ಅನ್ಯಧರ್ಮದ ಧಾಳಿಯಿಂದ ಉಳಿಸಿದ ಕೀರ್ತಿ 8ನೇ ಶತಮಾನದಲ್ಲಿ ಉದಯಿಸಿದ ಶ್ರೀ ಶಂಕರಭಗವತ್ಪಾದರಿಗೆ ಸಲ್ಲುತ್ತದೆ.

ಅನಂತರ 12ನೇ ಶತಮಾನದಲ್ಲಿ ಉದಯಿಸಿದ ರಾಮಾನುಜಾಚಾರ್ಯರು ಮತ್ತು 13ನೇ ಶತಮಾನದಲ್ಲಿ ಉದಯಿಸಿದ ಆಚಾರ್ಯ ಮಧ್ವರು ಈ ಆಚಾರ್ಯತ್ರಯರು ಹಿಂದೂ ಧರ್ಮಕ್ಕಾಗಿ ಸಾಕಷ್ಟು ಕೆಲಸಮಾಡಿದ್ದಾರೆ.

ಆಚಾರ್ಯತ್ರಯರ ರಚನೆಗಳೆಲ್ಲಾ ಸಂಸ್ಕೃತದಲ್ಲಿದ್ದು ಪಂಡಿತರ ಸೊತ್ತಾಗಿತ್ತು. ಶ್ರೀಸಾಮಾನ್ಯ ಹಾಗೂ ಸ್ತ್ರೀಯರು ಧರ್ಮತಿಳುವಳಿಕೆ ಯಿಂದ ವಂಚಿತರಾಗಿದ್ದರು. ಸಮಾಜದಲ್ಲಿ ಬಹುದೊಡ್ಡ ಸಂಖ್ಯೆ ಧರ್ಮದಿಂದ ವಂಚಿತರಾಗಿದ್ದರು.

ಕರ್ನಾಟಕದಲ್ಲಿ ಮೊಟ್ಟಮೊದಲಿಗೆ ಆಡುಭಾಷೆಗೆ ಪ್ರಾಶಸ್ತ್ಯಕೊಟ್ಟವರು ಜೈನಕವಿಗಳು ಕನ್ನಡದ ಆದಿಕವಿ ಎಂಬ ಪ್ರಶಸ್ತಿ ದೊರೆತಿರುವುದು ಪಂಪನಿಗೆ. ಈ ಹಿಂದೆ ದೊರೆತಿರುವ ಕನ್ನಡದ ಕೃತಿ ಶ್ರೀ ವಿಜಯನಿಂದ ರಚಿತವಾದ ಕವಿರಾಜ ಮಾರ್ಗ ಇದು ಕಾವ್ಯತ್ವವನ್ನು ತಿಳಿಸುವ ಕೃತಿಯಾಗಿದೆ. ಇದರ ನಂತರ ಬಂದದ್ದು ವಡ್ಡಾರಾಧನೆ. ಇದು 19 ಜೈನ ಧಾರ್ಮಿಕ ಕಥೆಗಳನ್ನೊಳಗೊಂಡಿದೆ. ಆರಂಭದಿಂದಲೂ ಧರ್ಮದೃಷ್ಟಿಯೇ ಸಾಹಿತ್ಯ ಸೃಷ್ಟಿಗೆ ಪ್ರೇರಕವೂ, ಕಾರಕವೂ ಆಗಿದೆ. ಪಂಪ. ರನ್ನ, ಜನ್ನ, ನೇಮಿಚಂದ್ರ ಇವರೆಲ್ಲಾ ಜೈನ ಕವಿಗಳೆ ಆಗಿದ್ದು ಕಾವ್ಯರಚನಾ ಉದ್ದಿಶ್ಯದೊಂದಿಗೆ ಸ್ವಮತಪ್ರಚಾರ ಪರಮತ ಖಂಡನೆ ಎರಡೂ ಸಾಗುತ್ತಿತ್ತು. ಇದರ ಮರ್ಮ ಮರಿತವರು ಮೊದಲಿಗೆ ಬಸವಣ್ಣನವರು, ವೀರಶೈವ, ಧರ್ಮ ಪ್ರಚಾರಕ್ಕೆ ಗ್ರಂಥಸ್ಥವಾದ ಕಠಿಣ ಕನ್ನಡವನ್ನೂ ಕೈಬಿಟ್ಟು, ಅತ್ಯಂತ ಸರಳವಾದ ವಚನ ಪದ್ಧತಿಯನ್ನು ತಮ್ಮದನ್ನಾಗಿಸಿಕೊಂಡರು. ನಂತರ ಬಂದವರು ತ್ರಿಪದಿ, ರಗಳೆ, ಷಟ್ಪದಿ ಮುಂತಾದ ಸಾಹಿತ್ಯ ಪ್ರಕಾರಗಳನ್ನು ಪ್ರಯೋಗಕ್ಕೆ ತಂದರು. ಪಾಮರನಿಗೂ ಧರ್ಮದ ತಿರುಳು ಅರ್ಥವಾಗುವಂತೆ ಮಾಡಿದವರು ಮೊಟ್ಟಮೊದಲಿಗೆ ಶರಣರು ಸಾಮಾನ್ಯರೇ ಮಠ ಪೋಷಕರು, ಯಾವುದೇ ಧರ್ಮ ಗಟ್ಟಿಯಾಗಿ ನಿಲ್ಲಬೇಕಾದರೆ ಆಮತ್ರಗಳು ಮೊದಲು ಪಾಮರರನ್ನು ತಲುಪಬೇಕು. ಈ ಸನ್ನಿವೇಶದಲ್ಲಿ ಶಿವಶರಣರು

ಜೈನ, ಬೌದ್ಧ ಹಾಗೂ ವೈದಿಕ ಧರ್ಮವನ್ನು ಎದುರಿಸಿ ತಮ್ಮ ಮತ ಪ್ರಚಾರವನ್ನು ನಡೆಸಬೇಕಿತ್ತು. ವಚನಕಾರರು ವಚನಗಳ ಮೂಲಕ ತಮ್ಮ ಮತ ಪ್ರಚಾರವನ್ನು ಪ್ರಾರಂಭಿಸಿದರು.

ವೀರಶೈವ ಮತದ ಪ್ರಾಚೀನತೆಯನ್ನು ಹುಡುಕ ಹೊರಟರೆ ಇದು ಆಗಮಗಳಿಂದ ಉಗಮವಾದ 'ಪಾಶುಪತಮತ'ವೇ ಆಗಿದೆ. ವೀರಶೈವ ಮತದ ಮುಖ್ಯ ಲಕ್ಷಣಗಳನ್ನು ಹಿಂದಿನ ಪಾಶುಪತಮತದಲ್ಲಿ ಕಾಣಬಹುದಾಗಿದೆ ಹಾಗೂ ಕಾಶ್ಮೀರದ ಶೈಲಿಸಂ, ಹಾಗೂ ತಮಿಳುನಾಡಿನ ಶೈವಮತ ಇವುಗಳೇ ವೀರಶೈವ ಮತದ ಪ್ರಾಚೀನ ಮತಗಳಾಗಿವೆ. ಹೀಗಿದ್ದರೂ ಕೂಡ ವಚನಕಾರರು.

''ಶೈವ ಸೈತಿರಹಾದ, ಪಾಶುಪತಿ ಪಥವನರಿಯ, ಕಾಳಾಮುಖಿ ಕಂಗೆಟ್ಟ ಮಹಾವ್ರತಿ ಮದವೇರಿದ ಸನ್ಯಾಸಿ ಪಾಷಂಡಿಯಾದ, ಕೌಲಿ ಮರುಳಾಗಿ ಹೋದ ಈ ಆರು ಭಕ್ತಿ ಸ್ಥಳಕ್ಕೆಸಲ್ಲವು''

ಎಂದಿದ್ದಾರೆ ಶರಣರು. ಇದಕ್ಕೆ ಕಾರಣವನ್ನು ಹೇಳುತ್ತಾ ಎಂ. ಆರ್. ಶ್ರೀನಿವಾಸ ಮೂರ್ತಿಗಳು (ವಚನಧರ್ಮಸಾರ) ಹಿಂದಿದ್ದ ಈ ಶೈವ ಪಂಥಗಳನ್ನು ಶರಣರು ತಿರಸ್ಕರಿಸುವುದಕ್ಕೆ ಕಾರಣ ಆ ಮತಗಳಲ್ಲಿ ಬಂದು ಸೇರಿದ್ದ ದುರಾಚಾರಗಳು ಮುಖ್ಯವಾಗಿರ ಬಹುದು ಎಂದಿದ್ದಾರೆ. ಶಿವನ ಘೋರ ರೂಪದ ಆರಾಧನೆಯಲ್ಲಿ ನಿರತರಾಗಿದ್ದ ಅಘೋರಿಗಳು ಮತ್ತು ಕಾಪಾಲಿಗಳಲ್ಲಿ ಅನೇಕ ಘೋರ ವಿಧಿಗಳು ಕಂಡು ಬರುತ್ತವೆ. ಪಾಶುಪತದಲ್ಲಿ ವಿಧಿಸಿರುವ ಅನೇಕ ಆಚರಣೆಗಳು ಸಹ ಅತಿಮಾರ್ಗೀಯವೇ ಆಗಿದೆ. ದುರಾಚರಣೆಗಳು, ಪ್ರಬಲಿಸುತ್ತಿದ್ದುದರಿಂದ ಹಾಗು ವೈದಿಕ ಮತದ ಪ್ರಭಾವದಿಂದ ವರ್ಣಾಶ್ರಮಧರ್ಮ ಪ್ರಾಬಲ್ಯವಾಗುತ್ತಿದ್ದುವು, ತತ್ವ ಜ್ಞಾನವೂ ತತ್ವಸಿದ್ಧಿಗಳೂ ಹಿಂದಕ್ಕೆ ಬಿದ್ದುವು. ಈ ಕಾರಣದಿಂದ ಆ ಮತಗಳನ್ನು ಖಂಡಿಸುವುದು ಅತ್ಯಾವಶ್ಯಕವಾಗಿತ್ತು. ಹಾಗೂ ಪರಮಾತ್ಮನ ಸೌಮ್ಯರೂಪದ ಉಪಾಸನೆಯನ್ನು ಜನಗಳಲ್ಲಿ ಪ್ರಚೋದಿಸಬೇಕಿತ್ತು. ಆತನ ಕರುಣೆ ಅನುಗ್ರಹ ಮರೆತು ಅಡ್ಡ ಹಾದಿಗೆ ಕೊಂಡೊಯ್ಯುವ ಪಂಥಗಳನ್ನು ಅವು ಯಾವ ಹೆಸರಿನವುಗಳಾಗಿದ್ದರೂ ಅವುಗಳನ್ನು ಖಂಡಿಸುವುದು ಮಹದುಪಕಾರವಾಗಿತ್ತು. ವಚನಕಾರರು ಈ ಮತಗಳ ಮೇಲೆ ಧಾಳಿ ಮಾಡಿ ಯಶಸ್ವಿಯಾಗಿ ಅವುಗಳ ಹೇಳ ಹೆಸರಿಲ್ಲದಂತೆ ಮಾಡಿದರು. 12ನೇ ಶತಮಾನದಲ್ಲಿ ಕಾಳಾಮುಖಿ, ಕಾಪಾಲಿ ಮತಗಳು ರಾಜಮಾನ್ಯತೆಯನ್ನು ಪಡೆದ ಮತಗಳಾಗಿದ್ದಾಗ್ಯೂ ಸಂಪೂರ್ಣವಾಗಿ ಹೇಳಹೆಸರಿಲ್ಲವಾಯ್ತು. ಆ ಮತಗಳು ಆಸ್ತಿಕ ಮತಗಳೇ ಆಗಿದ್ದುದರಿಂದ ಪರಮಾತ್ಮನಿದ್ದಾನೆಂದು ಹೇಳುವ ಅವಶ್ಯಕತೆ ಇರಲಿಲ್ಲ. ಆದರೆ ಆ ಪರಮಾತ್ಮನ ಸ್ವರೂಪ ಏನೆಂದು ತಿಳಿಸಬೇಕಿತ್ತು. ಭೀಭತ್ಸ ಕರ್ಮಗಳಿಂದ ಪರಮಾತ್ಮನು ಒಲಿಯುವುದಿಲ್ಲ, ಆತ ದಯಾಮಯನೂ, ಕರುಣಾಸಾಗರನೂ ಆಗಿರುವುದರಿಂದ, ಆತನನ್ನು ಒಲಿಸುವುದಕ್ಕೆ ನಿಷ್ಕಲ್ಮಶ ಭಕ್ತಿ ಅತ್ಯಾವಶ್ಯಕವೆಂದು ಮನದಟ್ಟು ಮಾಡಿಸಬೇಕಿತ್ತು. ಈ ಕೆಲಸವನ್ನು ವಚನಕಾರರು ಮಾಡಿದರು. ಮೊದಲಿನ ವಚನಕಾರರು ಸಿದ್ಧಾಂತದ ಗೋಜಿಗೆ ಹೋಗದೆ ಸತ್ಕ್ರಿಯಾಚರಣೆ, ಅಂತರಂಗ ಶುದ್ಧಿ, ಶುದ್ಧ ಚಾರಿತ್ರ್ಯ ಇವುಗಳನ್ನು ಒತ್ತಿ ಹೇಳಿ ಆಚಾರವೇ ಅಂಗವೆಂದು ತಳಹದಿಯನ್ನು ಭದ್ರಗೊಳಿಸಿದರು. ವಚನಧರ್ಮ ಅತ್ಯಂತ ಪ್ರಬಲವಾಗಿದ್ದು ಹಿಂದಿನ ದುರಾಚಾರ ಪದ್ಧತಿಯ ಶೈವ ಧರ್ಮವನ್ನು ಅಡಗಿಸಿಬಿಟ್ಟಿತು. ಕೆಲವಚನಕಾರರ ವಚನಗಳು ಉಪನಿಷದ್ವಾಕ್ಯವನ್ನೇ ಹೋಲುತ್ತದೇ (ಅಲ್ಲಮಪ್ರಭು, ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ) ಎಂಬುದಕ್ಕೆ, ಕಾರಣ ಹೇಳುತ್ತಾ ಎಂ. ಆರ್. ಶ್ರೀನಿವಾಸ ಮೂರ್ತಿ (ವಚನ ಧರ್ಮ ಸಾರ)ಯವರು ಹೀಗೆ ಹೇಳುತ್ತಾರೆ.

ಜ್ಞಾನ ಮಾರ್ಗಕ್ಕೆ ತಳಹದಿಯನ್ನು ಹಾಕಿದ ಉಪನಿಷತ್ಕೃತ್ಯಗಳಿಗೆ ಕರ್ಮಕಾಂಡ ಹಿನ್ನೆಲೆಯಾಗಿತ್ತು. ಆದ್ದರಿಂದ ಹೊಸಬೆಳಕು ಕಂಡವರಲ್ಲಿ ಕಂಡು ಸಾರಿದವರಲ್ಲಿ ಆ ಮಹರ್ಷಿಗಳೇ ಮೊದಲಿಗರು. ವಚನಕಾರರು ತಲೆ ಎತ್ತುವ ಕಾಲಕ್ಕೆ ಉಪನಿಷತ್ತುಗಳು ಹಿನ್ನೆಲೆಯಾಗಿದ್ದುವು. ಆದ್ದರಿಂದ ಪರವಸ್ತು, ಜೀವ, ಸೃಷ್ಟಿ ಮೊದಲಾದ ವಿಚಾರಗಳೆಲ್ಲಾ ಚರ್ಚೆಯಾಗಿ ಹೊಸಬೆಳಕು ಹರಡಿ ಎಲ್ಲವೂ ಕಾಣುವಂತಾಗಿದ್ದುವು. ಇದನ್ನು ಕೆಲವಚನಕಾರರು ಉಪಯೋಗಿಸಿ ಕೊಂಡಿದ್ದಾರೆ. ಆದರೆ ವಚನಕಾರರೂ ಸ್ವತಂತ್ರವಾಗಿಯೂ ಸತ್ಯಶೋಧನೆಗೆ ಪ್ರಯತ್ನ ಪಟ್ಟವರಾಗಿದ್ದಾರೆ. ಹಳೆಯ ಶೈವಮತದಲ್ಲಿ ಬಂದು ಸೇರಿದ್ದ ದುರಾಚಾರ ಪದ್ಧತಿಗಳ ಕಳೆಕಿತ್ತು ಅಚ್ಚ ಕನ್ನಡದ ಸಸಿ ನೆಟ್ಟು ತೆಗೆದ ಬೆಳೆ ಶರಣರ ವಚನ ಸಾಹಿತ್ಯ. ಇದು ಯಾರಿಂದಲೂ ಎರವಲು ಪಡೆದದ್ದಲ್ಲ. ಈ ಬೆಳೆ ಹೊಸತೆಂದರೆ ಹೊಸತು. ಹಳೆಯದೆಂದರೆ ಹಳೆಯದು. ಇದರಲ್ಲಿ ಮಹಾನಾಯಕರಾಗಿದ್ದವರು. ಬಸವಣ್ಣನವರು, ಅಲ್ಲಮಪ್ರಭು, ಚೆನ್ನ ಬಸವಣ್ಣನವರು, ದಾರಿ ತಪ್ಪಿದವರು ಧರ್ಮಮಾರ್ಗಕ್ಕೆ ಬರುವಂತಾಯ್ತು, ಹಾಗೆ ಬಂದವರನ್ನು ತಿರಸ್ಕರಿಸದೆ ಆದರದಿಂದ ತಮ್ಮ ಧರ್ಮದಲ್ಲಿ ಸೇರಿಸಿಕೊಂಡರು. ಸಾಮಾನ್ಯರೆಷ್ಟೋ ಮಂದಿ ಬಂದು ಸೇರಿದರು. ಸಿದ್ಧರಾಮನಂತಹ ಗುರುಗಳೂ, ಅಕ್ಕ ಮಹಾದೇವಿಯಂತಹ ಸ್ತ್ರೀಯರೂ ಶರಣ ಧರ್ಮಕ್ಕೆ ಬಂದು ಸೇರಿದರು. ಕಲ್ಯಾಣದ ಅನುಭವ ಮಂಟಪ ಶಿವಾನುಭವಮಂಟಪವಾಗಿ ವಚನಸಾಹಿತ್ಯದ ಉಗಮವಾಯ್ತು. ಒಂದು ವಿಶ್ವ ಧರ್ಮ ಸೃಷ್ಟಿಯಾಯ್ತು. ಸಂಸ್ಕೃತಕ್ಕೆ ವಿದಾಯ ಹೇಳಿ ಜನಸಾಮಾನ್ಯರ ಆಡುಭಾಷೆಯಲ್ಲಿ ಜನಸಾಮಾನ್ಯನ ಉದ್ಧಾರಕ್ಕೆ ಟೊಂಕ ಕಟ್ಟಿ ನಿಂತರು ಶಿವಶರಣರು. ತಮಿಳುನಾಡಿನಲ್ಲಾಗಲೀ, ತೆಲುಗುನಾಡಿನಲ್ಲಾಗಲೀ ಈ ಹಿಂದೆ ನಡೆಯದಿದ್ದ ಕ್ರಾಂತಿ ಕನ್ನಡದ ನೆಲದಲ್ಲಿ ನಡೆಯಿತು. ತೆಲುಗುನಾಡಿನ ಆರಾಧ್ಯ ಸಂಪ್ರದಾಯವೂ ಹರಿದು ಬಂತು. ತಮಿಳುನಾಡಿನ ಭಕ್ತಿ ಗೀತೆಗಳೂ ಸೇರಿ ಕನ್ನಡನಾಡಿನಲ್ಲಿ ಬಹುದೊಡ್ಡ ಕ್ರಾಂತಿಯಾಯ್ತು. ಕರ್ನಾಟಕದಲ್ಲಿ ವಚನ ಸಾಹಿತ್ಯದ ವಿಪುಲ ಭಂಡಾರವೇ ಬೆಳೆಯಿತು. ಬಸವಣ್ಣನವರು, ಅಲ್ಲಮ ಪ್ರಭು, ಚೆನ್ನ ಬಸವಣ್ಣನವರು, ರಾಮನಾಥ, ಅಕ್ಕಮಹಾದೇವಿ ಇವರುಗಳೇ ಅಲ್ಲದೆ ಮುಂದುವರಿದು ನಿಜಗುಣ ಶಿವಯೋಗಿ ಮಹಾಂತಶಿವಯೋಗಿ, ಮುಪ್ಪಿನಷಡಕ್ಷರಿ, ಸರ್ವಜ್ಞ, ಶಿಶುನಾಳ ಷರೀಫರವರೆಗೆ ಅನೇಕರನ್ನು ವಚನಸಾಹಿತ್ಯದಲ್ಲಿ ವಿದ್ವಾಂಸರು ಗುರುತಿಸುತ್ತಾರೆ. ವಚನಗಳು, ವೀರಶೈವರ, ಧರ್ಮ, ಕರ್ಮ, ನಿತ್ಯ ನಿಯಮ, ಆಚಾರ, ವಿಚಾರ, ನಡೆನುಡಿ ಎಲ್ಲವನ್ನು ನಿರ್ದೇಶಿಸುವಂತಹವುಗಳಾಗಿವೆ.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಸಾಮಾಜಿಕವಾಗಿಯೂ ಧಾರ್ಮಿಕವಾಗಿಯೂ ಹೆಚ್ಚಿನ ಆಂದೋಲನ ಪ್ರವೃತ್ತಿಯನ್ನು ತೋರಿಸಿದವರಲ್ಲಿ ವಚನಕಾರರು ಮುಖ್ಯರು. ಗಂಡು-ಹೆಣ್ಣು, ಬ್ರಾಹ್ಮಣ ಶೂದ್ರ, ಅಗ್ರಜ - ಅಂತ್ಯಜ ಎಂಬ ಭೇದವಿಲ್ಲದೆ ಎಲ್ಲರಿಗೂ ಸಮಾನತೆಯನ್ನು ನೀಡಿ ಎಲ್ಲರಿಗೂ ಉದ್ಧಾರವಾಗಲು ಅವಕಾಶಕಲ್ಪಿಸಿದರು. ಸಾಮಾಜಿಕ, ಧಾರ್ಮಿಕನಿಲುವು.

ಮೊಲೆ ಮೂಡಿ ಬಂದರೆ ಹೆಣ್ಣೆಂಬರು; ಗಡ್ಡ ಮೀಸೆ ಬಂದರೆ ಗಂಡೆಂಬರು ।
ನಡುವೆ ಸುಳಿವಾತ್ಮ ಹೆಣ್ಣು ಅಲ್ಲ ಗಂಡೂ ಅಲ್ಲ ಕಾಣಾ ರಾಮನಾಥ ।

ಸ್ತ್ರೀಪುರುಷರ ಸಮಾನತೆಯನ್ನು ಹೇಳಿದರು.

ಕಾಸಿಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ ವೇದದ ನೋದಿ ಹಾರುವನಾದ ಇದು ಕಾರಣ, ಕೂಡಲಸಂಗಮದೇವಾ, ಲಿಂಗಸಂಗವನರಿತವನೇ ಕುಲಜನು ॥

ಇದು ವರ್ಣಾಶ್ರಮಧರ್ಮದ ನಿಲುವು.

'ಕಾಯಕವೇ ಕೈಲಾಸ' ಕಾಯಕವನ್ನು ಬಹು ಗೌರವದಿಂದ ಕಾಣತಕ್ಕುದು. ಅದು, ಗುರು, ಲಿಂಗ ಜಂಗಮರಿಗಿಂತಧಿಕ ಕಾಯಕದಲ್ಲಿ ನಿರತನಾಗಿದ್ದ ನಿಷ್ಠಾವಂತನಿಗೆ ಮತ್ತೆ ಯಾವ ಸಾಧನೆಯೂ ಇಲ್ಲದೆ ಮುಕ್ತಿ ದೊರೆಯುತ್ತದೆ ಎನ್ನುತ್ತಾರೆ ಶರಣರು.

ಗುರುವಾದಡೂ, ಕಾಯಕದಿಂದಲೇ ಜೀವನ್ಮುಕ್ತಿ, ಲಿಂಗವಾದಡೂ ಕಾಯಕದಿಂದವೇ ಶಿಲೆಯಕುಲ ಹರಿವುದು ಜಂಗಮವಾದರೂ, ಕಾಯಕದಿಂದ ವೇಷದ ಪಾಶ ಹಿರಿವುದು. ಇದು ಚೆನ್ನಬಸವಣ್ಣ ಪ್ರೀಯ ಚಂದೇಶ್ವರ ಲಿಂಗದ ಅರಿವು''

'ಕಾರೇ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಕ್ಕರ್ಪಿತವಲ್ಲದೆ; ದುರಾಸೆಯಿಂದ ಬಂದುದು ಅನರ್ಪಿತ'

ಸಮಾಜದ ಯಾವ ವ್ಯಕ್ತಿಯಾದರೂ ದುಡಿದು ತಿನ್ನುವುದೇ ಧರ್ಮ ಶರಣರು. ವೇದದ ಕರ್ಮಕಾಂಡವನ್ನು ಖಂಡಿಸುತ್ತಾರೆ. ಜ್ಞಾನ ಮಾರ್ಗವನ್ನು ಮಾತ್ರ ಪುರಸ್ಕರಿಸುತ್ತಾರೆ. ಉಪನಿಷತ್ತನ್ನೂ ಪುರಸ್ಕರಿಸಿದ್ದಾರೆ. ಹರಿದಾಸರು ವೇದವನ್ನೂ, ಉಪನಿಷತ್ತನ್ನೂ ಎರಡನ್ನೂ ಪುರಸ್ಕರಿಸಿದ್ದಾರೆ. ಪುರಂದರ ಸಾಹಿತ್ಯವನ್ನು 'ಪುರಂದರೋಪನಿಷತ್ತು' ಎಂದಿದ್ದಾರೆ.

ದಯವಿಲ್ಲದಾಧರ್ಮ ಆವುದಯ್ಯಾ? ದಯವೇಬೇಕು ಸಕಲ ಪ್ರಾಣಿಗಳಲ್ಲಿ' ಎಂದ ಶರಣರು. ವೈದಿಕ ಧರ್ಮದಲ್ಲಿ ಯಜ್ಞಯಾಗಾದಿಗಳಲ್ಲಿ ನಡೆಸುತ್ತಿದ್ದ ಪಶುಬಲಿಗಳನ್ನು ಖಂಡಿಸಿದ್ದಾರೆ.

'ವೈವಾಹಿಕ ಸಂಬಂಧ'

'ಉಂಬುದು ಉಡುವುದು ಶಿವಾಚಾರ, ಕೊಂಬುದು ಕೊಡುವುದು ಕುಲಾಚಾರ' ಎಂಬ ಅನಾಚಾರಿಯ, ಮಾತ ಕೇಳಲಾಗದು, ವಿಪ್ರ, ಮೊದಲು, ಅಂತ್ಯಜ ಕಡೆಯಾಗಿ ಶಿವಭಕ್ತರು ಒಂದೇ ಎಂದು ಕೊಟ್ಟು ಕೊಂಬುದು ಸದಾಚಾರ ಉಳಿದೆಲ್ಲಾ ಅನಾಚಾರಾ.... ಕೂಡಲ ಚೆನ್ನ ಸಂಗಮ ದೇವ' ಎಂದು ಹೇಳಿದ್ದರೂ ಒಂದೆರಡು ಘಟನೆಗಳ ವಿನಃ ವರ್ಣಾಶ್ರಮದ ಬೇರುಗಳನ್ನು ಅಲ್ಲಾಡಿಸಲು ಶಿವಶರಣರು ಸಮರ್ಥರಾಗಲಿಲ್ಲ. ಅಲ್ಲಮಪ್ರಭು ಶರಣರ ಬಗ್ಗೆ ವರ್ಣಾಶ್ರಮ ಧರ್ಮದ ಬಗ್ಗೆ ಹೇಳುತ್ತಾರೆ.

''ಅಂಗದ ಮೇಲೆ ಲಿಂಗವುಳ್ಳುದೆಲ್ಲವು ಸಂಗಮನಾಥನೆಂಬ ಭಾವನೆ ಬಸವಣ್ಣಂಗಾಯಿತಲ್ಲದೆ, ಎನಗೆ ಆಭಾವವಿಲ್ಲ ನೋಡಾ! ಅಂಗೈಕ್ಯ ಶರಣರ ಕಂಡರೆ ನಂಬಿ ನೆಚ್ಚಿ, ಅವರ ಪಾದಕ್ಕೆರಗುವುದೆನ್ನ ಮನವು''

ಎನ್ನುತ್ತಾರೆ. ಅಲ್ಲಮ ಪ್ರಭುಗಳ ವಚನವನ್ನು ನೋಡಿದರೆ ಇವರು ಶುದ್ಧ ಅದ್ವೈತಿಗಳೆಂದೇ ಹೇಳಬೇಕು. ಸ್ವಮತದ ಅಭಿಮಾನವಿಲ್ಲ. ಭವಿ, ಶರಣ ಎಂಬ ಮಾತನ್ನೂ ಒಪ್ಪರು. ಲಿಂಗ ಕಟ್ಟಿದವರೆಲ್ಲಾ ಅವರ ದೃಷ್ಟಿಯಲ್ಲಿ ಪವಿತ್ರರಲ್ಲ. ಲಿಂಗದಲ್ಲಿ ಐಕ್ಯವಾಗಬಲ್ಲ. ಪವಿತ್ರಾತ್ಮಕ್ಕೆ ಮಾತ್ರ ಎರಗುವೆ ಎನ್ನುತ್ತದೆ ಅವರ ಮನ. ಅಲ್ಲಮ ಪ್ರಭುಗಳ ಈವಚನ ಗಮನಿಸಿ.

''ಪ್ರಾಣ ಲಿಂಗಕ್ಕೆ ಕಾಯವೇ ಸಜ್ಜೆ. ಆಕಾಶಗಂಗೆಯಲ್ಲಿ ಮಜ್ಜನ ಹೂವಿಲ್ಲದ ಪರಿಮಳದ ಪೂಜೆ, ಹೃದಯ ಕಮಲದಲ್ಲಿ ಶಿವ ಶಿವಾ ಎಂಬ ಶಬ್ದ ಇದು ಅದ್ವೈತ ಕಾಣಾಗು ಹೇಶ್ವರಾ'' ಎನ್ನುತ್ತಾರೆ.

''ಆಚಾರವೇ ಲಿಂಗ''

''ಕಳಬೇಡ ಕೊಲಬೇಡ, ಹುಸಿಯನುಡಿಯಲಿ ಬೇಡ
ಮುನಿಯಬೇಡನ್ಯರಿಗೇ ಅಸಹ್ಯಪಡಬೇಡಾ
ತನ್ನ ಬಣ್ಣಿಸ ಬೇಡ ಇದಿರ ಹಳಿಯಲಿ ಬೇಡಾ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮ ನೊಲಿಸುವ ಪರಿ''

ಯಾರು ಭಕ್ತರಾಗಬೇಕೆಂದು ಬಯಸುವರೋ ಅವರು ಅದಕ್ಕೆ ತಕ್ಕ ನಡತೆಯುಳ್ಳವರಾಗಿರಬೇಕು. ಇಲ್ಲವಾದರೆ ಭಕ್ತಿ ಆತ್ಮವಂಚನೆಯಲ್ಲಿ ಆರಂಭವಾಗಿ ಆಷಾಢಭೂತಿಯಂತೆ ಪರರವಂಚನೆಯಲ್ಲಿ ಮುಕ್ತಾಯವಾಗುತ್ತದೆ.

''ದೇವಲೋಕ ಮರ್ತ್ಯ ಲೋಕವೆಂಬುದು ಬೇರಿಲ್ಲ ಕಾಣ ಭೋ, ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸರ್ಗ ಅನಾಚಾರವೇ ನರಕ ಇದಕ್ಕೆ ನೀವೇ ಪ್ರಮಾಣ ಕೂಡಲಸಂಗಮದೇವ''

''ಶರಣ - ಸತಿ ಲಿಂಗ - ಪತಿ ಎನ್ನುತ್ತಾಳೆ ಅಕ್ಕಮಹಾದೇವಿ

ಹಸಿವಾದೊಡೆ ಭಿಕ್ಷಾನ್ನಗಳುಂಟು, ತೃಷೆಯಾದಡೆ ಕೆರೆ ಹಳ್ಳಗಳುಂಟು, ಶಯನಕ್ಕೆ ಹಾಳುದೇಗುಲಗಳುಂಟು. ಚೆನ್ನ ಮಲ್ಲಿ ಕಾರ್ಜುನಯ್ಯ ಆತ್ಮ ಸಂಗಾತಕ್ಕೆ ನೀನೆನಗುಂಟು''

ಅಲ್ಲಮ ಪ್ರಭು ಮೊದಲಾದ ಒಬ್ಬಿಬ್ಬರ ದೃಷ್ಟಿ ಆ ನಿಷ್ಕಲ ಪರ ವಸ್ತುವಿನ ಕಡೆಗಿರುತ್ತದೆ. ಉಳಿದ ವಚನಕಾರರು ಮತ ಪ್ರಚಾರದ ಉತ್ಸಾಹದಲ್ಲಿ ಶಿವಪಾರಮ್ಯವನ್ನು ಹೊಗಳುವ ಆವೇಶದಲ್ಲಿ

(1) ''ವಿಷ್ಣುವೇ ದೈವವೆಂದು ಆರಾಧಿಸಿದ ಬಲಿಗೆ ಬಂಧನವಾಯ್ತು. ವಿಷ್ಣುವೇ ದೈವವೆಂದು ಆರಾಧಿಸಿದ ಕರ್ಣನ ಕವಚ ಹೋಯಿತು''

(2) ನಾರಾಯಣನೆಂಬುವ ಕಾಣಿ ಗೀರಾಯಣನೆಂಬುವನ ಕಾಣಿ.

(3) ನೀನಲ್ಲದನ್ಯ ದೈವವುಂಟೆಂಬುವನ, ಕೆನ್ನವಾರೆ ಸೀಳಿದಲ್ಲದೆ ಎನ್ನ ಮುನಿಸು ಹೋಗದಯ್ಯಾ.

(4) 'ಹರಿಹರರೊಂದೇ' ಎಂದರೆ ಸುರಿಯವೇ ಬಾಯಲ್ಲಿ ಬಾಲಹುಳುಗಳು' ಎಂದೂ ಹೇಳಿದ್ದಾರೆ. ವಿಷ್ಣು ಪಾರಮ್ಯವನ್ನು ಎತ್ತಿ ಹಿಡಿಯುವ ಆವೇಶದಲ್ಲಿ ಕೆಲಹರಿದಾಸರ ರಚನೆಗಳಲ್ಲೂ ಸಹ. ಪರಧರ್ಮದ ನಿಂದೆಯ ಬಗ್ಗೆ ಈ ಹಿಂದೆಯೇ ತಿಳಿಸಿದ್ದೇನೆ. ಹರಿಹರರಲ್ಲಿ ಭೇದವೆಣಿಸಿ, ತಮ್ಮ ಧರ್ಮವೇ ಹೆಚ್ಚು ಮಿಕ್ಕ ಧರ್ಮವಲ್ಲ ಎನ್ನುವುದು ಮೂರ್ಖತನ. ಭಾರತದಲ್ಲಿ ಕಾಣಿಸಿಕೊಂಡ ಭಕ್ತಿ ಮಾರ್ಗದ ಶಾಖೆಗಳಿವು. ಯಾವುದೇ ಭೇದವೆಣಿಸದೆ ಸರ್ವರಿಗೂ ಸುಲಭವಾದ ಹಾಗೂ ಸಮ್ಮತವಾದ ಮಾರ್ಗವನ್ನು ತೋರಿದ್ದು ಭಕ್ತಿ ಮಾರ್ಗ 'ಹರಿಯ ಭಕ್ತರಿಗೆ ಹರಿ ಹರನ ಭಕ್ತರಿಗೆ ಹರ' (ಮಹಾಂತ ಶಿವಯೋಗಿಗಳ ಗೀತೆ)

ನರರೇನ ಭಾವಿಸುವರದರಂತೆ ತೋರುವನು
ಅವರವರ ದರುಶನಕೆ
ಅವರವರ ವೇಶದಲಿ
ಅವರವರಿಗೆಲ್ಲ ಗುರುನೀನೊಬ್ಬನೇ
ಅವರವರ ಭಾವಕ್ಕೆ
ಅವರವರ ಪೂಜೆಗಂ

ಅವರವರಿಗೆಲ್ಲ ದೇವನೀನೊಬ್ಬನೇ (ಮುಪ್ಪಿನ ಷಡಕ್ಷರಿ) ಲೋಕದ ಮತಗಳಲ್ಲಿ ಅನೇಕ ಮತೀಯ ವಿಚಾರಗಳೂ, ಆಚಾರ ಪದ್ಧತಿಗಳೂ ಇರುತ್ತದೆ. ಇದು ಅನೇಕ ವೇಳೆ ಜನತೆಯ ಮನವನ್ನು ಕಲುಷಿತಗೊಳಿಸುತ್ತದೆ. ಸಮಾಜವನ್ನು ಒಡೆಯುತ್ತದೆ. ಆದರೆ, ಧರ್ಮದ ವಿಚಾರವೇ ಬೇರೆ. ಎಲ್ಲಾ ಧರ್ಮಗಳಲ್ಲೂ ಎಲ್ಲಾ ದೇಶ, ಎಲ್ಲಾ ಕಾಲಕ್ಕೂ, ಅಷ್ಟೇಕೆ ಮಾನವ ಜನಾಂಗಕ್ಕೇ ಒಪ್ಪಿತವಾಗುವ ಆಚಾರಸಂಹಿತಿಗಳಿವೆ. 'ಇಲ್ಲಿಯೂ ಅಲ್ಲಿಯೂ, ಸಲ್ಲುವಂತೆ ಬಾಳುವುದು ಮತ ಕಾದಿ ಮಡಿದರೆ ಧರ್ಮ ಕೂಡಿಸಿ ಬದುಕಿಸುತ್ತದೆ. ವಿನಯ ಸೇವೆ, ತ್ಯಾಗ, ಒಬ್ಬರೊಡನೊಬ್ಬರ ಸಾಮರಸ್ಯ ಗಾಳಿಯಂತೆ ಎಲ್ಲರಿಗೂ ಉಸಿರಾಗುವ ವಿಶಾಲಮನೋಭಾವ ಇವುಗಳೇ ಆ ಭಗವಂತನನ್ನು ಕಾಣಬೇಕೆಂಬುವ ಮನೋಭಾವವಾಗಬೇಕು. ಧರ್ಮಮಾನವತಾ ಧರ್ಮವಾಗಬೇಕು. ವಿಶ್ವ ಧರ್ಮವಾಗಬೇಕು. ಇದನ್ನೇ ಎಲ್ಲಾ ಮಹನೀಯರೂ ಒತ್ತಿ ಹೇಳಿದ್ದಾರೆ. ಈ ಅಂಶಗಳು ನಮಗೆ ದಾಸ ಸಾಹಿತ್ಯದಲ್ಲೂ, ವಚನಸಾಹಿತ್ಯದಲ್ಲೂ ಹೇರಳವಾಗಿ ದೊರೆಯುತ್ತದೆ.

ದಾಸ ಸಾಹಿತ್ಯಕ್ಕೆ ಶ್ರೀ ಮಧ್ವಾಚಾರ್ಯರು ಮಂಡಿಸಿದ ಮಧ್ವಮತ ಹಿನ್ನೆಲೆಯಾದರೆ ಶಿವಶರಣರ ವಚನ ಸಾಹಿತ್ಯಕ್ಕೆ ಷಟಸ್ಥಲ ಸಿದ್ಧಾಂತ ಹಿನ್ನೆಲೆಯಾಗಿದೆ.

'ಕೆರೆಯ ನೀರನು ಕೆರೆಗೆ ಚೆಲ್ಲಿ '' ಎಂದು ದಾಸರು ಹಾಡಿದ್ದರೆ 'ಶಿವನೊಡವೆ ಶಿವನಿಗೊಪ್ಪಿಸಿ' ಎಂದು ಶರಣರು ಹೇಳಿದ್ದಾರೆ.

ಕರ್ನಾಟಕದಲ್ಲಿ 12ನೇ ಶತಮಾನದಲ್ಲಿ ಘಟಿಸಿದ ಶಿವಪಾರಮ್ಯವನ್ನು ಸಾರಿದ ಶರಣ ಧರ್ಮದ ವಚನ ಸಾಹಿತ್ಯವೇ ಆಗಲೀ 15, 16ನೇ ಶತಮಾನದಲ್ಲಿ ಹರಿಸರ್ವೋತ್ತಮತ್ವವನ್ನು ಸಾರಲು ಘಟಿಸಿದ ದಾಸ ಸಾಹಿತ್ಯವೇ ಆಗಲಿ ಕರ್ನಾಟಕದ ಜನತೆಗೆ ಸಿಕ್ಕಿದ ಅತ್ಯಮೂಲ್ಯ ರತ್ನಗಳಾಗಿವೆ. ಈ ಸಾಹಿತ್ಯಗಳು, ಆರೋಗ್ಯಕರವಾದ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಿ ಮಾನವನ ಏಳ್ಗೆಗೆ ದಾರಿ ದೀವಿಗೆಗಳಾಗಿವೆ. ''ದೇವನೊಬ್ಬ ನಾಮ ಹಲವು'' ''ಊರು ಒಂದೆ ದಾರಿ ನೂರಾರು'' ಅವನನ್ನು ಶಿವನೆನ್ನಿ, ಹರಿ ಎನ್ನಿ, ಬ್ರಹ್ಮನೆನ್ನಿ, ಶಕ್ತಿಎನ್ನಿ, ಏನೆಂದರೂ ಸರಿಯೆ ನಮ್ಮನ್ನು ಈ ಜಗತ್ತಿನಲ್ಲಿ ಆಡಿಸುತ್ತಿರುವ ಅಗೋಚರ ಶಕ್ತಿಯೊಂದಿಗೆ ನಮ್ಮ ಡಿ.ವಿ.ಜಿ. ಹೇಳಿರುವಂತೆ.

''ಇಹುದೋ ಇಲ್ಲವೋ ತಿಳಿಯಗೊಡದೊಂದು ವಸ್ತು ನಿಜ ।
ಮಹಿಮೆಯಿಂ ಜಗವಾಗಿ ಜೀವವೇಶದಲಿ ॥
ವಿಹರಿಪುದದೊಳ್ಳಿತೆಂಬುದು ನಿಸದವಾದೊಡಾ
ಗಹನತತ್ವಕ್ಕೆ ಶರಣೋ ಮಂಕುತಿಮ್ಮ ॥

ಈ ಅಗೋಚರ ಶಕ್ತಿಯನ್ನು ಸೇರಲು ಇಲ್ಲಾ ಆ ಶಕ್ತಿಯ ಸಾನ್ನಿಧ್ಯವನ್ನು ಹೊಂದಲು ಸದಾಚಾರದಿಂದೊಡಗೂಡಿದ ಸನ್ಮಾರ್ಗದಲ್ಲಿ ನಡೆಯಲೇಬೇಕೆಂದು ಎಲ್ಲಾ ಮಹಾಪುರುಷರೂ ಒತ್ತಿ ಹೇಳಿದ್ದಾರೆ. ಇಂತಹ ಎಲ್ಲಾ ಮಹನೀಯರ ಮಾರ್ಗದರ್ಶನ ಶತ ಶತ ಮಾನ ಕಳೆದರೂ ಇಂದೂ ಬೇಕಾಗಿದೆ. ಸಮಾಜದಲ್ಲಿ ನೊಂದ, ನಿರಾಶೆ ಹೊಂದಿದ ಸನ್ಮಾರ್ಗಕ್ಕಾಗಿ ತಡಕಾಡುವ ಜೀವಿಗಳಿಗೆ ಭಕ್ತಿಯ ಊರುಗೋಲನ್ನು ನೀಡಿ 'ಬಂದದ್ದೆಲ್ಲಾ ಬರಲಿ ಗೋವಿಂದನ ದಯವೊಂದಿರಲಿ' ಎಂಬ ಧೈರ್ಯತುಂಬುತ್ತಿರುವ ಶಿವಶರಣರೇ ಇರಲಿ, ದಾಸ ವರ್ಯರುಗಳೇ ಇರಲಿ ಎಲ್ಲರೂ ನಮಸ್ಕಾರಾರ್ಹರು. ನಾದಬ್ರಹ್ಮರಾದ ಶ್ರೀ ತ್ಯಾಗರಾಜ ಸ್ವಾಮಿಗಳು ಹೇಳಿರುವಂತೆ ''ಎಂದರೋ ಮಹಾನುಭಾವುಲು ಅಂದರಿಕಿ ವಂದನಮು''

(ಮುಗಿಯಿತು)

# ಸುತ್ತಮುತ್ತ

### ಕನ್ನಡ ಸಂಘ ಅಂತರ ಕಾಲೇಜು ಪ್ರತಿಭಾ ಸ್ಪರ್ಧೆಗಳ ಉದ್ಘಾಟನೆ

ದಿನಾಂಕ ೩೦-೧-೨೦೦೦ ಸಂಜೆ ೩ ಗಂಟೆಗೆ ಅಂತರ್ ಕಾಲೇಜು ಪ್ರತಿಭಾ ಸ್ಪರ್ಧೆಗಳನ್ನು ಉದ್ಘಾಟಿಸಲಾಯಿತು. ವೀರಶೈವ ಬ್ಯಾಂಕ್ ಮುಂಬಯಿಯ ನಿರ್ದೇಶಕರಾದ ಶ್ರೀ ಸುಭಾಷ್ ಮೈತ್ರೆಯವರು ಉದ್ಘಾಟಿಸುತ್ತಾ ಕನ್ನಡದಲ್ಲಿ ನಾವು ವಿಚಾರ ಮಾಡುವ ಯಾವುದೇ ಭಾಷೆಯನ್ನು ಮಾತನಾಡಬಹುದು. ಆದರೆ ನಾವು ಕನ್ನಡಿಗರಾಗಿಯೇ ಉಳಿಯಬೇಕಾದರೆ ನಾವು ಕನ್ನಡ ಕಲಿಯುವುದು ಅತ್ಯಂತ ಅಗತ್ಯ. ಅದಕ್ಕೆ ಬೇಕಾದ ಯಾವುದೇ ಬಗೆಯ ನೆರವನ್ನು ಕೊಡಲು ನಾನು ಸದಾ ಸಿದ್ಧ ಎಂದು ಹೇಳಿದರು. ಮಾಜಿ ಪ್ರಾಂಶುಪಾಲರಾದ ಡಾ. ಜಿ. ಡಿ. ಜೋಶಿಯವರ ಕನ್ನಡದ ಮಹತ್ವವನ್ನು ಕುರಿತು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು. ಪ್ರಾಂಶುಪಾಲ ಜಿ.ಎಸ್. ವೈ. ರಾಮ್ ಸಭಿಕರನ್ನು ಸ್ವಾಗತಿಸಿರು. ಕನ್ನಡ ಸಂಘದ ಕಾರ್ಯಾಧ್ಯಕ್ಷರಾದ ಡಾ. ಕೆ. ರಘುನಾಥ್ ಕಾರ್ಯಕ್ರಮವನ್ನು ನಿರೂಪಿಸಿದರು.

ನಂತರ ನಡೆದ ಪ್ರತಿಭಾ ಸ್ಪರ್ಧೆಗಳ ಅಧ್ಯಕ್ಷತೆಯನ್ನು ಕನ್ನಡ ಕುಲಕೋಟಿಯ ಟ್ರಸ್ಟಿಗಳಾದ ಶ್ರೀ ಲಿಂಗರಾಜ ಪಾಟೀಲರು ವಹಿಸಿದರು. ಶ್ರೀ ಜಯ ಕೆ. ಶೆಟ್ಟಿ, ಶ್ರೀ ಅಶೋಕ ಶೆಟ್ಟಿ ಮತ್ತು ಶ್ರೀಮತಿ ಲಕ್ಷ್ಮಿ ಜೋಶಿಯವರು ತೀರ್ಪುಗಾರರಾಗಿ ಸಹಕರಿಸಿದರು. ಹಲವು ಕಾಲೇಜಿನ ಕನ್ನಡ ವಿದ್ಯಾರ್ಥಿಗಳು ಸ್ಪರ್ಧೆಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡರು.

### ಡಾ. ಪ್ರಹ್ಲಾದ ಮುದ್ಗಲ್ ನಿಧಿವಶ

ಖ್ಯಾತ ರಂಗ ತಜ್ಞ, ಸಂಶೋಧಕ, ಕನ್ನಡ - ಮರಾಠಿ ಸ್ನೇಹ ಸೇತುವಾಗಿದ್ದ ಪ್ರಹ್ಲಾದ ಮುದ್ಗಲ್ ಅವರು ತಾ. 19-1-2000ದಂದು ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು. ಅವರಿಗೆ 70 ವರ್ಷ ವಯಸ್ಸಾಗಿತ್ತು.

ಕೆಲ ಸಮಯದಿಂದ ಅಸ್ವಸ್ಥರಾಗಿದ್ದ ಮುದ್ಗಲ್ ಪೋವಾಯಿಯ ಸ್ವಗೃಹದಲ್ಲಿ ಕೊನೆಯುಸಿರೆಳೆದಿದ್ದು, ಬಂಧು - ಬಳಗ ಹಾಗೂ ಸಾರಸ್ವತ ಲೋಕದ ಅಭಿಮಾನಿಗಳನ್ನು ಅಗಲಿದ್ದಾರೆ. ಮೂಲತಃ ಬಿಜಾಪುರ ಜಿಲ್ಲೆಯ ಬಾಗೇವಾಡಿನವರಾಗಿದ್ದ ಪ್ರಹ್ಲಾದ್ ಮುದ್ಗಲ್ ಮೊದಲು ಮುಂಬಯಿ ರೈಲ್ವೆಯಲ್ಲಿ ಬಳಿಕ ಪೋವಾಯಿ ಐಐಟಿಯಲ್ಲಿ ಭದ್ರತಾ ಅಧಿಕಾರಿಯಾಗಿ ನಿವೃತ್ತರಾಗಿದ್ದರು.

ಕನ್ನಡ - ಮರಾಠಿ ಭಾಷೆಗಳಲ್ಲಿ ಹಲವು ತೌಲನಿಕ ವಿಮರ್ಶೆ, ಸಂಶೋಧನಾ ಲೇಖನ ಪುಸ್ತಕಗಳನ್ನು ಬರೆದಿರುವ ಮುದ್ಗಲ್ ಅವರ ಕೆರೂರು ವಾಸುದೇವಾ ಚಾರ್ಯ - ಬದುಕು, ಬರಹ ಸಂಶೋದನಾ ಪ್ರಬಂಧಕ್ಕೆ ಮುಂಬೈ ವಿವಿ. ಡಾಕ್ಟರೇಟ್ ಪದವಿ ನೀಡಿತ್ತು.

'ಶಾಂಕುತಲ ನಾಟಕವು' (ಸಂಪಾದನೆ) ಕನ್ನಡ - ಮರಾಠಿ ರಂಗಭೂಮಿ ತೌಲನಿಕ ಅಧ್ಯಯನ ಕನ್ನಡ ರಂಗಭೂಮಿ (ವಿಮರ್ಶೆ ) ಅವರ ಇತರ ಕೃತಿಗಳು.

### ಮುಂಬೈ ವಿ.ವಿ. ಕನ್ನಡ ವಿಭಾಗ ಶೋಕ

ಕನ್ನಡ - ಮರಾಠಿ ಸೇಹ ಸೇತುವಾಗಿದ್ದು, ಸಂಶೋಧನಾ ಕ್ಷೇತ್ರ ಮತ್ತು ಹಾಗೂ ರಂಗಭೂಮಿಯ ಮೇಲೆ ವಿಶೇಷ ಆಸಕ್ತಿ ವಹಿಸಿ ದುಡಿದ ಪ್ರಹ್ಲಾದ ಮುದ್ಗಲ್ ನಿಧನಕ್ಕೆ ಮುಂಬೈ ವಿ.ವಿ.ಯ ಕನ್ನಡ - ಮರಾಠಿ ಭಾಷಾ ಕೊಡುಕೊಳ್ಳುವಿಕೆಗೆ ಮುದ್ಗಲ್ ಕೊಡುಗೆ ಸದಾ ಸ್ಮರಣೀಯ ಎಂದು ವಿಭಾಗ ಮುಖ್ಯಸ್ಥ ಡಾ. ತಾಳ್ತಜೆ ವಸಂತ ಕುಮಾರ್ ಹೇಳಿದ್ದಾರೆ.

### ಕನ್ನಡ ವಿಭಾಗ, ಕೆ. ಜೆ. ಸೋಮಯ್ಯ ಕಾಲೇಜು ಕವಿತೆಗಳಲ್ಲಿ ಹಾಸ್ಯ

ಕವಿತಾ ರಚನಾಕ್ರಮ ಸೂತ್ರಗಳನ್ನು ಅಭ್ಯಾಸಿಸಬೇಕು. ಕವಿತೆಯು ಭಾವದ ಅವಿಷ್ಕಾರವಾಗಿರುತ್ತದೆ. ಪ್ರಾಸಬದ್ಧ ಕವಿತೆಗೇಯತೆ ಯಿಂದ ಕೂಡಿರುತ್ತದೆ. ಮನಸ್ಸಿಗೆ ಆನಂದವನ್ನು ಕೊಡುತ್ತದೆ. ಅಂತರಂಗದ ನಿಗೂಢ ಸತ್ಯಕಾವ್ಯದಲ್ಲಿ ಹೊರಚಿಮ್ಮುತ್ತದೆ. ಹಾಸ್ಯವು ಸಹಜವಾಗಿ ಕವಿತೆಯಲ್ಲಿ ಬರಬೇಕು. ವಿಡಂಬನೆ ಜೀವನವನ್ನು ತಿದ್ದುವಂತಿರಬೇಕು ಎಂದು ಖ್ಯಾತ ಕವಿ, ನಾಟಕಕಾರ ಶ್ರೀಕೊಡು ಭೋಜ ಸೆಟ್ಟಿಯವರು ಹೇಳಿದರು. ಇವರು ಸೋಮ್ಮಯಾ ಕಾಲೇಜು ಕನ್ನಡ ಸಂಘ ಏರ್ಪಡಿಸಿದ್ದ 'ಕವಿತೆಗಳಲ್ಲಿ ಹಾಸ್ಯ' ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

ಹೊರನಾಡಿನಲ್ಲಿ ಪ್ರತಿಕೂಲ ಪರಿಸ್ಥಿತಿ ಯಲ್ಲಿಯು ಕನ್ನಡ ಲೇಖಕರು ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ. ಹಾಸ್ಯ ಸಾಹಿತ್ಯದ ಪ್ರಮುಖ ಅಂಗವಾಗಿದೆಯೆಂದು ಪ್ರಾಂಶುಪಾಲ ಡಾ. ಎಸ್. ಕೆ. ಭವಾನಿ ಅವರು ಅಧ್ಯಕ್ಷ ಸ್ಥಾನದಿಂದ ಸಾರಿದರು.

ಕವಿತೆಯಲ್ಲಿ ವೈಚಾರಿಕತೆ, ಚಿಂತನಶೀಲತೆ, ಅನುಭವ ಪಕ್ವತೆ ಪ್ರಮುಖ ದ್ರವ್ಯವಾಗಿರಬೇಕು. ಹಾಸನೋವನ್ನು ನಿವಾರಿಸುವಂತಿರಬೇಕು. ಹಾಸ್ಯ ಮನಸ್ಸನ್ನು ಅರಳಿಸುವಂತಿರಬೇಕು. ಕೆರಳಿಸುವಂತಿರ ಬಾರದೆಂದು ಕನ್ನಡ ವಿಭಾಗದ ಮುಖ್ಯಸ್ಥ ಡಾ. ಸಂಜೀವ ಶೆಟ್ಟಿ ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ನುಡಿದರು.

ಇತ್ತೀಚೆಗೆ ಸೋಮಯ್ಯ ಕಾಲೇಜಿನ ಕನ್ನಡ ಸಂಘವು ಏರ್ಪಡಿಸಿದ್ದ ಭಾಷೆ ಮತ್ತು ಸಂಸ್ಕೃತಿ ವಿಚಾರ ಗೋಷ್ಠಿಯಲ್ಲಿ ಡಾ. ಹಾ. ಮಾ. ನಾಯಕರು

ಮಾತೃಭಾಷೆಯ ಅಭಿಮಾನ ಎಲ್ಲರಲ್ಲಿಯೂ ಸಹಜವಾಗಿಯೇ ಇರತಕ್ಕದ್ದು. ಭಾಷೆಯನ್ನು ಪ್ರೀತಿಸಬೇಕು. ಭಾಷಾದ್ವೇಷಸಲ್ಲದು. ನಮ್ಮೆಲ್ಲರ

ಸಂಸ್ಕೃತಿಯ ಮೂಲ ಒಂದಾಗಿದ್ದರೂ ವೈವಿಧ್ಯಗಳು ಸಾಕಷ್ಟು ಇವೆ. ಭಾಷೆಗೆ ಸಂಸ್ಕೃತಿಯ ವಿನಾ ಉಳಿವಿಲ್ಲ, ಕನ್ನಡ ಭಾಷೆಯ ಸಂಸ್ಕೃತಿಯ ಹಿರಿಮೆಯನ್ನು ಉಳಿಸಿ ಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಭಾಷೆ ಮತ್ತು ಸಂಸ್ಕೃತಿ ಜೀವನದಲ್ಲಿ ಇಲ್ಲದಿದ್ದರೆ ಬಾಳು ಬಯಲು ಸೀಮೆಯ ಜೋಳು ಬಾಳಿನಂತಾ ಗುವುದೆಂದು'' ತಮ್ಮ ಉದ್ಘಾಟನಾ ಭಾಷಣದಲ್ಲಿ ಪ್ರತಿಪಾದಿಸಿದರು.

ಭುವನೇಂದ್ರ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ, ಸಾಹಿತಿ ಶ್ರೀ ಎಂ. ರಾಮಚಂದ್ರ, ಮುಂಬಯಿ ವಿ.ವಿ. ಕನ್ನಡ ವಿಭಾಗದ ಮುಖ್ಯಸ್ಥ ಡಾ. ವಸಂತ್‌ಕುಮಾರ್ ತಾಳ್ತಜೆ, ಸೋಮಯ್ಯಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ. ಎಸ್. ಭವಾನಿ, ಪ್ರಾಧ್ಯಾಪಕರಾದ ಡಾ. ಸಂಜೀವ ಶೆಟ್ಟಿಯವರು ಈ ವಿಚಾರ ಗೋಷ್ಠಿಯಲ್ಲಿ ಭಾಗವಹಿಸಿದ್ದರು.

## ಕರ್ನಾಟಕ ಸಂಘ ಮುಂಬಯಿಯಲ್ಲಿ 'ಹೂಮಳೆ'ಪ್ರದರ್ಶನ

ಮುಂಬಯಿ : ಕರ್ನಾಟಕ ಸಂಘ ಮುಂಬಯಿಯ ಲಲಿತಕಲಾ ವಿಭಾಗದ ವತಿಯಿಂದ ದಿನಾಂಕ 28-12-1999ರಂದು 'ವಿಧವಾ ವಿವಾಹ' ಸಾಮಾಜಿಕ ಸಮಸ್ಯೆಗಳ ಬಗ್ಗೆ ಜನಜಾಗೃತಿ ಮೂಡಿಸಲೆಂದು ನಿರ್ಮಿಸಿದ 'ಹೂಮಳೆ' ಚಲನಚಿತ್ರ ಪ್ರದರ್ಶಿಸಲಾಯ್ತು. ಈ ಚಲನಚಿತ್ರಕ್ಕೆ ರಾಜ್ಯ ಹಾಗು ರಾಷ್ಟ್ರಪ್ರಶಸ್ತಿ ಲಭಿಸಿದೆ. ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀ ಗಿರಿಧರ್ ಕಾರ್ಕಳವರು 'ಪರಿವರ್ತನ' ಸಂಸ್ಥೆಯ ಸ್ಥಾಪಕ ಹಾಗು ಮ್ಯಾನೆಂಜಿಗ್ ಟ್ರಸ್ಟಿಯಾದ ನಡಹಳ್ಳಿ ಶ್ರೀಪಾದ ರಾವ್‌ರವರನ್ನು ಸ್ವಾಗತಿಸುತ್ತಾ ರಾವ್‌ರವರು ಸ್ವತಃ ವಿಧವೆಯನ್ನು ಮದುವೆಯಾಗಿ ಸಮಾಜಕ್ಕೆ ಮಾದರಿಯಾಗಿದ್ದಾರೆ. ಅವರ ಸಂಸ್ಥೆಯ ಮೂಲಕ ಈಗಾಗಲೇ 15 ವಿಧವಾ ವಿವಾಹ ನಡೆದಿರುವುದು ಶ್ಲಾಘನೀಯ ಎಂದು ಪ್ರಶಂಸಿದರು. ಸಂಘದ ಅಧ್ಯಕ್ಷರಾದ ಶ್ರೀ ಕೆ. ಜಯರಾಮ ಆಳ್ವರವರು ಹೂ ಗುಚ್ಛ ಕೊಟ್ಟು ಸಂಘದ ಪರವಾಗಿ ಹಾರ್ದಿಕ ಶುಭಾಶಯಗಳನ್ನು ಕೋರುತ್ತಾ ಸಂಘದ ಸದಸ್ಯರೆಲ್ಲರ ಪರವಾಗಿ ದೇಣಿಗೆ ರೂಪದಲ್ಲಿ ರೂ. 5000/- ಚೆಕ್ಕನ್ನು ನೀಡಿ ಪ್ರೋತ್ಸಾಹಿಸಿದರು. ಅಧ್ಯಕ್ಷ ಭಾಷಣದಲ್ಲಿ ಆಳ್ವರು ಮಾತನಾಡುತ್ತಾ ಒಂದು ಸಂಸ್ಥೆಯು ಯಶಸ್ವಿಯಾಗಿ ನಡೆಯಬೇಕಾದರೆ ಆರ್ಥಿಕ ಸೌಲಭ್ಯ ಅಗತ್ಯ. ನಡಹಳ್ಳಿ ಶ್ರೀಪಾದ ರಾವ್‌ರವರು ಒಂದು ಉತ್ತಮ ಉದ್ದೇಶ ಇಟ್ಟು ಸಂಸ್ಥೆಯನ್ನು ನಡೆಸುತ್ತಾ ಇದ್ದಾರೆ. ಅವರ ಶ್ರಮಕ್ಕೆ ಒಳ್ಳೆಯ ಪ್ರತಿಫಲ ಸಿಗಲಿ ಎಂದು ಹಾರೈಸಿದರು.

ಕಾರ್ಯಕ್ರಮದ ಕೊನೆಗೆ ಮುಖ್ಯ ಅತಿಥಿಯಾದ ಶ್ರೀಪಾದರಾವ್‌ರವರು ತಮ್ಮ ಸಂಸ್ಥೆ 'ಪರಿವರ್ತನ'ದ ಮುಖ್ಯ ಉದ್ದೇಶಕ್ಕೋಸ್ಕರ ದಾನಿಗಳ ದೇಣಿಗೆಯ ಅವಶ್ಯಕತೆ ಬಗ್ಗೆ ಸೂಚಿಸಿದರು. ನಾನು ವಿಧವಾ ವಿವಾಹದ ಸಮಸ್ಯೆಯ ಮೇಲೆ 'ಹೊಸಬದಕು' ಕಾದಂಬರಿ ಬರೆದ ಮೇಲೆ, ಬೇರೆಯವರಿಗೆ ಉಪದೇಶ ನೀಡುವದಕ್ಕಿಂತ ತಾನೇ ವಿಧವೆಯನ್ನು ಮದುವೆಯಾಗಿ 'ಪರಿವರ್ತನ ' ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ 'ವಿಧವಾ ವಿವಾಹ'ದ ಸಮಸ್ಯೆಯನ್ನು ಬಗೆ ಹರಿಸಲು ಪ್ರಯತ್ನ ಪಟ್ಟೆ ಸಾಕಷ್ಟು ಯಶಸ್ಸು ಬಂದಿದೆ. ಎಂದು ಹೇಳಿ ಕರ್ನಾಟಕ ಸಂಘದವರು ಚಲನಚಿತ್ರ 'ಹೂಮಳೆ'ಯನ್ನು ಪ್ರದರ್ಶಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು.

## ಶ್ರೀಮತಿ ವೈಜಯಂತಿ ಕಾಶಿಯವರ 'ಅಂಬಾ ಕೂಚಿಪುಡಿ' ನೃತ್ಯರೂಪಕ

ಕರ್ನಾಟಕ ಸಂಘ ಮುಂಬಯಿ ಹಾಗೂ ಕೂಚಿಪುಡಿ ಕಲಾಕೇಂದ್ರದ ಜಂಟಿ ಆಶ್ರಯದಲ್ಲಿ ಸಹಸ್ರಮಾನದ ಕೊನೆಯ ದಿನ 31-12-99ರಂದು ಸುಪ್ರಸಿದ್ಧ ಕೂಚಿಪುಡಿ ನೃತ್ಯ ಕಲಾವಿದೆಯಾದ ಶ್ರೀಮತಿ ವೈಜಯಂತಿ ಕಾಶಿ ಹಾಗೂ ಅವರ ನೃತ್ಯ ಬಳಗದವರಿಂದ ಮಹಾಭಾರತ ಪುರಾಣದ ಆಧಾರಿತ ಕಥೆ 'ಅಂಬಾ' ಎಂಬ ನೃತ್ಯ ರೂಪಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಸಂಘದ ಕಾರ್ಯಾಧ್ಯಕ್ಷರಾದ ಶ್ರೀ ಅನಂತ ಸುಬ್ಬರಾವ್‌ರವರು ಕನ್ನಡದ ಶ್ರೇಷ್ಠ ನಾಟಕಕಾರ ಗುಬ್ಬಿ ವೀರಣ್ಣನವರ ಮೊಮ್ಮಗಳಾದ, ಪ್ರಸಿದ್ಧ ಚಲನಚಿತ್ರ ಕಲಾಕಾರರಾದ ಶ್ರೀ ವಿಜಯ ಕಾಶಿಯವರ ಪತ್ನಿ ವೈಜಯಂತಿ ಕಾಶಿ ಹಾಗೂ ಅವರ ನೃತ್ಯ ಬಳಗದವರನ್ನು ಸ್ವಾಗತಿಸಿ ವೈಜಯಂತಿ ಕಾಶಿಯವರ ಕಿರು ಪರಿಚಯವನ್ನು ನೀಡುತ್ತಾ ಅವರ ನೃತ್ಯ ಪ್ರಾವೀಣ್ಯತೆ, ಅರಸಿಕೊಂಡು ಬಂದ ಗೌರವ ಪ್ರಶಸ್ತಿಗಳ ಬಗ್ಗೆ ಮಾಹಿತಿ ನೀಡಿದರು. ಕನ್ನಡದ ಹಿರಿಯ ಕವಿ ಶ್ರೀ ಬಿ. ಎ. ಸನದಿಯವರು ವೈಜಯಂತಿ ಕಾಶಿಯವರಿಗೆ ಹೂಗುಚ್ಛಕೊಟ್ಟು, ಗೌರವಿಸಿದರು.

ಸುಮಾರು ಒಂದುವರೆ ತಾಸು ಶೃಂಗಾರ, ವೀರ ಹಾಗೂ ಕರುಣಾರಸರಿಂದ ಕೂಡಿದ 'ಅಂಬಾ' ನೃತ್ಯ ರೂಪಕದಲ್ಲಿ, ಕಲಾವಿದರು ತಮ್ಮ ಮೋಹಕ ನೃತ್ಯಾಭಿನಯದಿಂದ ನೋಡುವವರ ಕಣ್ಮನಗಳನ್ನು ತಣಿಸಿದರು.

## ಶ್ರೀ ಧನಂಜಯ ಕುಂಬ್ಳೆಯವರಿಗೆ ಪೇಜಾವರ ಸದಾಶಿವರಾವ್ ಸ್ಮಾರಕ ಪ್ರಶಸ್ತಿ

ಮುಂಬಯಿಯ ಕರ್ನಾಟಕ ಸಂಘವು ಕನ್ನಡ ನವ್ಯ ಕಾವ್ಯ ಮಾರ್ಗದ ಮೊದಲ ಮೈಲಿಗಲ್ಲನ್ನು ನೆಟ್ಟ ಕವಿ ದಿವಂಗತ ಪೇಜಾವರ ಸದಾಶಿವರಾವ್ ಅವರ ಸ್ಮರಣಾರ್ಥ ಉದಯೋನ್ಮುಖ ಕವಿಗಳಿಗೆ ವರ್ಷಂಪ್ರತಿ ಕೊಡಮಾಡುವ ಕಾವ್ಯ ಪ್ರಶಸ್ತಿಯ 1999ನೇ ಸಾಲಿನ ಪ್ರಶಸ್ತಿಗಾಗಿ ಕಾಸರಗೋಡಿನ ಶ್ರೀ ಧನಂಜಯ ಕುಂಬ್ಳೆ ಅವರ 'ಮೊದಲ ಪಾಪ' ಕವನ ಸಂಕಲನವನ್ನು ಆಯ್ಕೆ ಮಾಡಲಾಗಿದೆ. ಶ್ರೀ ಧನಂಜಯ ಕುಂಬ್ಳೆ ಅವರು ಒಂದು ಸಾವಿರದ ಒಂದು ನೂರು ರೂಪಾಯಿಗಳು ಹಾಗೂ ಪ್ರಮಾಣ ಪತ್ರಗಳನ್ನೊಳಗೊಂಡ ಈ ಬಹುಮಾನವನ್ನು ಪಡೆದ ಆರನೆಯ ವ್ಯಕ್ತಿಯಾಗಿದ್ದಾರೆ. ಮುಂಬಯಿಯ ಪ್ರಸಿದ್ಧ ಲೇಖಕಿ ಶ್ರೀಮತಿ ತುಳಸಿ ವೇಣುಗೋಪಾಲ್ ಹಾಗೂ ಲೇಖಕ ಶ್ರೀ ಸಾ. ದಯಾ ಅವರು ಪ್ರಸ್ತುತ ಸಾಲಿನ ನಿರ್ಣಾಯಕರಾಗಿ ಸಹಕರಿಸಿದ್ದಾರೆ.

## ಜ್ಯೋತಿ ಸಹಕಾರಿ ಕ್ರೆಡಿಟ್ ಸೊಸೈಟಿಯ ಕಂಪ್ಯೂಟರೀಕರಣ ಮತ್ತು ಉಳಿತಾಯ ಖಾತೆಯ ಉದ್ಘಾಟನಾ ಸಮಾರಂಭ

ಮುಂಬಯಿ : ಮುಂಬಯಿ ಮಹಾನಗರದ ಕೋಟೆಯಲ್ಲಿ ಕುಲಾಲ ಸುಧಾರಕ ಸಂಘದ ವತಿಯಿಂದ ಕಳೆದ 18 ವರ್ಷದಿಂದ ಜನರ ಸೇವೆ ಗೈಯುತ್ತಾ ಬರುತ್ತಿರುವ ಜ್ಯೋತಿ ಅರ್ಬನ್ ಕೊ. ಆಪ್ ಕ್ರೆಡಿಟ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಆರ್. ಎಂ. ಮದ್ಯ ಮತ್ತು ಕುಲಾಲ ಸುಧಾರಕ ಸಂಘದ ಅಧ್ಯಕ್ಷರಾದ ಶ್ರೀ ಪಿ. ಕೆ. ಸಾಲ್ಯಾನ್‌ರವರ ಹಸ್ತದಿಂದ ಕಂಪ್ಯೂಟರೀಕರಣ ಮತ್ತು ಉಳಿತಾಯ ಖಾತೆಯ ಉದ್ಘಾಟನಾ ಸಮಾರಂಭವು ಕಳೆದ ತಾ. 8-1-2000 ದಂದು ನೆರವೇರಿತು.

ಸೊಸೈಟಿಯ ಕಾರ್ಯದರ್ಶಿಯವರಾದ ಶ್ರೀ ಎನ್. ಜಿ. ಮೂಲ್ಕಿರವರು ನೆರೆದ ಸರ್ವ ಶೇರುದಾರರು, ಖಾತೆದಾರರು ಹಾಗೂ ಇದರ ಸಭಿಕರನ್ನು ಸ್ವಾಗತಿಸಿದ ಬಳಿಕ ಸೊಸೈಟಿಯ ಅಧ್ಯಕ್ಷರು ಹಾಗೂ ಕುಲಾಲ ಸಂಘದ ಅಧ್ಯಕ್ಷರು ಅಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡರು. ನೆರೆದ ಸಭೆಯ ಸಂಕ್ಷಿಪ್ತ ವಿವರಣೆಯನ್ನು ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು. ಸೊಸೈಟಿಯು ಕಳೆದ 18 ವರ್ಷಗಳಿಂದ ನಡೆದು ಬಂದ ರೀತಿ ನೀತಿ ಹಾಗೂ ಪ್ರಗತಿ ಬಗ್ಗೆ ಸಂಪೂರ್ಣ ವರದಿಯನ್ನು ನೆರೆದ ಸಭೆಗೆ ನೀಡಿದರು. ಅದರ ಜನ್ಮಕ್ಕೆ ಕಾರಣೀಭೂತರಾದ ಅದರ ಶಂಕು ಸ್ಥಾಪಕರನ್ನೂ, ಅದರ ಪ್ರಗತಿಯಲ್ಲಿ ಸತತವಾಗಿ ದುಡಿದ ಮಾಜಿ ಅಧ್ಯಕ್ಷರು ಹಾಗೂ ಕಾರ್ಯಕಾರೀ ಮಂಡಳಿಯ ಸದಸ್ಯರ ಹೆಸರೆತ್ತಿ ಪ್ರಶಂಸಿದರು. ಹಾಗೂ ಉಪಕಾರ ಸ್ಮರಣೆ ಮಾಡಿದರು. ಈ ಸೊಸೈಟಿಯ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಿ ಸರ್ವ ನೌಕರ ವೃಂದ ಹಾಗೂ ಏಜೆಂಟ್ಸ್‌ರವರೆಲ್ಲರನ್ನು ನೆನೆಸಿಕೊಂಡು ಉಪಕಾರ ಸ್ಮರಣೆ ಮಾಡಿದ ನಂತರ ಇದೀಗಲೇ ಕೆಲವೇ ವರ್ಷಗಳಿಂದ 'Savings Account' ಉಳಿತಾಯ ಖಾತೆಯನ್ನು ಪ್ರಾರಂಭಿಸುವರೇ ರಿಜಿಸ್ಟಾರಿಂದ ಒಪ್ಪಿಗೆ ಪಡೆದುಕೊಂಡು 2000 ವರ್ಷದ ಕಾಣಿಕೆಯೆಂದು 'ಜ್ಯೋತಿ ಉಳಿತಾಯ ಖಾತೆ'ಯ ಉದ್ಘಾಟನಾ

ಕಾರ್ಯಕ್ರಮವು ಆರ್. ಎಂ. ಮಡ್ವ ಮತ್ತು ಪಿ. ಕೆ. ಸಾಲ್ಯಾನ್‌ರವರ ಹಸ್ತದಲ್ಲಿ ಜ್ಯೋತಿ ಬೆಳಗಿಸಿ ಮಾಡಲಾಯಿತು. ಹಾಗೂ ಜ್ಯೋತಿ ಸೊಸೈಟಿಯ ಎಲ್ಲಾ ಕಾರ್ಯಕಲಾಪಗಳನ್ನು ಕಂಪ್ಯೂಟರೀಕರಣ ಮಾಡಲಾಯಿತು. ಅಂದಿನ ಸಭೆಯಲ್ಲಿ ಸೊಸೈಟಿಯ ಕೋಶಾಧಿಕಾರಿ ಶ್ರೀ ದೇವದಾಸ್ ಕುಲಾಲ್, ಮೆನೇಜರ್. ಬಿ. ವಾಮನ್ ಕರ್ಕೇರ ಹಾಗೂ ಇತರ ಡೈರೆಕ್ಟರ್ ಶೇರುದಾರರು ಉಪಸ್ಥಿತರಿದ್ದರು.

ಸಭೆಯಲ್ಲಿ ಶ್ರೀಯುತರುಗಳಾದ ಪಿ. ಕೆ. ಸಾಲ್ಯಾನ್ ಎಚ್. ಎಂ. ಫೋರಟ್, ಸುಂದರ್ ಮೂಡಬಿದ್ರಿ ಕಂಪ್ಯೂಟರ್‌ನ ಸರ್ವ ಮಾಹಿತಿಯನ್ನಿತ್ತ ಜಯಂತ ಜೋಶಿ ಹಾಗೂ ಇತರರು ಸೊಸೈಟಿಯ ಬಗ್ಗೆ ಕೆಲವೊಂದು ಮಾತುಗಳನ್ನಿತ್ತು ಮಾತನಾಡಿದರು.

ಹಾಗೂ ಸೊಸೈಟಿಯ ಸರ್ವತೋಮುಖ ಅಭಿವೃದ್ಧಿಯಲ್ಲಿ ಸರ್ವ ಶೇರುದಾರರು ಹಾಗೂ ಇತರ ಖಾತೆದಾರರು ತುಂಬು ಹೃದಯ ಸಹಕಾರವನ್ನಿತ್ತು ಆದಷ್ಟು ಬೇಗ Jyoti Co-op. Bank ಆಗುವಂತೆ ಪ್ರೋತ್ಸಾಹಿಸಬೇಕಾಗಿ ವಿನಂತಿಸಿದರು.

**ಚೆನ್ನೈನಲ್ಲಿ ಯಶಸ್ವೀ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಪ್ರಚಾರಕ್ಕೆ ಕರೆ**

7ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಸಮ್ಮೇಳನ ಚೆನ್ನೈನಲ್ಲಿ ಡಿಸೆಂಬರ್ 25 ಮತ್ತು 26ರಂದು ಯಶಸ್ವಿಯಾಗಿ ನಡೆಯಿತು.

'ದೆಹಲಿ ಕನ್ನಡಿಗ' ಪತ್ರಿಕೆ ಆಶ್ರಯದಲ್ಲಿ ನಡೆದ ಈ ಸಮ್ಮೇಳನದಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಕವಿಗೋಷ್ಠಿ, ಮಹಿಳಾ ಉತ್ಸವ, ಸಂಗೀತ, ನೃತ್ಯ ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು, ಪುಸ್ತಕ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತಲ್ಲದೆ ದೇಶದಾದ್ಯಂತದಿಂದ ಸಾಹಿತಿಗಳು, ಕಲಾವಿದರು, ಪ್ರಾಧ್ಯಾಪಕರು, ಕನ್ನಡ ಸಂಘ, ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಮ್ಮೇಳನ ಉದ್ಘಾಟಿಸಿದ ಕರ್ನಾಟಕದ ವಾರ್ತಾ ಮತ್ತು ಪ್ರಚಾರ ಸಚಿವ ಪ್ರೊ. ಬಿ. ಕೆ. ಚಂದ್ರಶೇಖರ್ ಅವರು ಬದಲಾದ ಜಗತ್ತಿಗೆ ಸ್ಪಂದಿಸಿ ಹೊಸ ಆವಿಷ್ಕಾರಗಳನ್ನು ಪರ್ಯಾಲೋಚಿಸಿ ಸ್ವೀಕರಿಸಿ ಕರ್ನಾಟಕ ಸಂಸ್ಕೃತಿ ಪ್ರಚಾರ ಕೈಗೊಳ್ಳಬೇಕೆಂದರಲ್ಲದೆ ಈ ಕಾರ್ಯಕ್ಕೆ ಕರ್ನಾಟಕ ಸರ್ಕಾರ ಸಂಪೂರ್ಣ ಬದ್ಧವಾಗಿ ಬೆಂಬಲಿಸಲಾಗುವುದೆಂದರು.

ಸಮ್ಮೇಳನ ಸಂಚಾಲಕ ಬಾ. ಸಾಮಗ ಅವರು ಕರ್ನಾಟಕ ಸಂಸ್ಕೃತಿ ವೈಭವ ಪುನರುತ್ಥಾನವೇ ಈ ಸಮ್ಮೇಳನದ ಮುಖ್ಯ ಉದ್ದೇಶವಾಗಿದೆ ಯೆಂದರಲ್ಲದೆ ಇದಕ್ಕಾಗಿ ಕೇಂದ್ರ ಸರ್ಕಾರ ನೆನೆಗುದಿಯಲ್ಲಿರುವ ಕರ್ನಾಟಕದ ಎಲ್ಲ ಯೋಜನೆಗಳಿಗೆ ಅನುಮತಿ ನೀಡಿ ಕಾರ್ಯಗತ ಗೊಳಿಸಬೇಕೆಂದರು. ತಮಿಳುನಾಡಿನ ತಮಿಳು ಸಂಸ್ಕೃತಿ ಸಚಿವ ಡಾ. ಎಂ. ತಮಿಳ್‌ಕುಡಿಮಗನ್ ಅವರು ತಮಿಳುನಾಡು ಮತ್ತು ಕರ್ನಾಟಕದ ನಡುವೆ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ ಇನ್ನಷ್ಟು ಹೆಚ್ಚಿಸಿಕೊಳ್ಳಬೇಕೆಂದರು. ಅಣ್ಣಾ ವಿಶ್ವ ವಿದ್ಯಾಲಯದ ಕುಲಪತಿ ಡಾ. ಎ. ಕಲಾನಿಧಿ ಅವರು ಎಲ್ಲರನ್ನು ಸೆಳೆದುಕೊಳ್ಳುವ ಶಕ್ತಿ ಕರ್ನಾಟಕ ಸಂಸ್ಕೃತಿಗಿದೆಯೆಂದರಲ್ಲದೆ ಹೊರನಾಡಿನಲ್ಲಿನ ಕನ್ನಡ ಸಮ್ಮೇಳನದಿಂದ ಕನ್ನಡಿಗರ ಕೀರ್ತಿ ಹೆಚ್ಚುತ್ತದೆಂದರು.

ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಇಂಡಿಯನ್ ಓವರ್‌ಸೀಸ್ ಬ್ಯಾಂಕಿನ ಚೇರ್‌ಮನ್ ಆರ್. ವಿ. ಶಾಸ್ತ್ರಿ ಅವರು ಸಾಹಿತಿಗಳು ಕನ್ನಡಾಭಿಮಾನವನ್ನೇ ಬೆಳೆಸಬೇಕೆಂದರಲ್ಲದೆ ಕರ್ನಾಟಕದ ಆರ್ಥಿಕ ಪ್ರಗತಿಗೆ ಆದ್ಯತೆನೀಡಿದರೆ ಸಂಸ್ಕೃತಿ ಪುನರುತ್ಥಾನ ಸಾಧ್ಯವೆಂದರು. ಲೋಕ ಶಿಕ್ಷಣ ಟ್ರಸ್ಟಿನ ಕಾರ್ಯದರ್ಶಿ ಕೆ. ಶಾಮರಾವ್ ಅವರು ಕನ್ನಡ ಪ್ರಚಾರ ಕಾರ್ಯದಲ್ಲಿ ನಿರುತ್ಸಾಹ ಸಲ್ಲದೆಂದರಲ್ಲದೆ ಪತ್ರಿಕೋದ್ಯಮ ಸಂಸ್ಕೃತಿ ಪ್ರಚಾರ ಕಾರ್ಯದಲ್ಲಿ ಬೆಂಗಾವಲಾಗಿದೆಯೆಂದರು. ತಮಿಳುನಾಡಿನ ಮಾಜಿ ಸಚಿವ ಡಾ. ಎಚ್. ವಿ. ಹಂದೆ ಅವರು ಕರ್ನಾಟಕ ಸಂಸ್ಕೃತಿ ಪ್ರಚಾರ ಕಾರ್ಯದಲ್ಲಿ ಪಕ್ಷ ಬೇಧ ತೊರೆಯಬೇಕೆಂದರಲ್ಲದೆ ಭಾಷಾ ಸೌಹಾರ್ದದಿಂದ ಭಾರತದ ಪ್ರಗತಿ ಸಾಧ್ಯವೆಂದರು.

ಸಮ್ಮೇಳನದ ಅಧ್ಯಕ್ಷತೆವಹಿಸಿದ್ದ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಹಾ ಮಂಡಳಿಯ ಅಧ್ಯಕ್ಷರೂ ಕರ್ನಾಟಕ ವಿ.ವಿ. ಮಾಜಿಕುಲಪತಿಗಳೂ ಆದ ಡಾ. ಎಸ್. ರಾಮೇಗೌಡ ಅವರು ತಾಂತ್ರಿಕ ರಂಗದಲ್ಲಿ ಕರ್ನಾಟಕ ಪ್ರಥಮ ಸ್ಥಾನ ಗಳಿಸುವುದರೊಂದಿಗೆ ತಾಂತ್ರಿಕ ಶಿಕ್ಷಣದ ಕಲಿಗಾರಿಕೆ ಶಿಕ್ಷಣಕ್ಕೆ ಕನ್ನಡ ಅಳವಡಿಸಬೇಕೆಂದರಲ್ಲದೆ ಕನ್ನಡಿಗರು ಎಲ್ಲಿದ್ದರೂ ಕನ್ನಡತನ ಮುಂದುವರಿಸುವುದರೊಂದಿಗೆ ಕನ್ನಡ ಕುರಿತು ಸಂಕುಚಿತ ಮನೋಭಾವ ತೊರೆಬೇಕೆಂದರು.

**ಪ್ರಶಸ್ತಿ ವಿತರಣೆ :** ಸಮ್ಮೇಳನದಲ್ಲಿ 'ಸಂಯುಕ್ತ ಕರ್ನಾಟಕ' ಪತ್ರಿಕೆ ವ್ಯವಸ್ಥಾಪಕ ಸಂಪಾದಕ ಕೆ. ಶಾಮರಾವ್ ಅವರಿ ಕನ್ನಡ ವಿದ್ಯಾರಣ್ಯ ಪ್ರಶಸ್ತಿಯನ್ನೂ, ಕವಿ ಪ್ರೊ. ಕೆ. ಎಸ್. ನಿಸಾರ್ ಅಹಮದ್ ಅವರು ಬಿ.ಎಂ.ಶ್ರೀ ಸಾಹಿತ್ಯ ಪ್ರಶಸ್ತಿಯನ್ನೂ, ಕಲಾವಿದ ಪಿ. ಶ್ರೀಧರ ಹಂದೆ ಅವರಿಗೆ ಶಂಕರ ನಾರಾಯಣ ಸಾಮಗ ಯಕ್ಷಗಾನ ಪ್ರಶಸ್ತಿಯನ್ನು, ಶ್ರೀಮತಿ ವಸಂತಿ ಪೈ ಅವರಿಗೆ ಶ್ರೇಷ್ಠ ಸಾಮಾಜಿಕ ಸೇವಾ ಕಾರ್ಯಕರ್ತ ಪ್ರಶಸ್ತಿಯನ್ನೂ ನೀಡಲಾಯಿತು. ಗಣನೀಯ ಸೇವೆ ಸಲ್ಲಿಸಿದ ಡಾ. ಬಿ. ನರಸಿಂಹಯ್ಯ, ಡಾ. ಸಿ. ರಾಮಸ್ವಾಮಿ, ಎಸ್. ದಿವಾಕರ್, ಕೆ. ವಾಸುದೇವರಾವ್, ಉಡ್ಪಿ ಜಯರಾಂ ಎಸ್. ರಾಜಾರಾಂ, ಆರ್.ಎನ್. ಕೆ. ಪ್ರಸಾದ್, ಡಾ. ವಿ. ಗೋಪಾಲ ಕೃಷ್ಣ, ಪಿ. ಜಿ. ಶ್ರೀನಿವಾಸಮೂರ್ತಿ, ಕೆ. ಎಸ್. ರಾವ್, ಕೆ. ಶಾಂತಾರಾಂ ಕುಡ್ವ ಮತ್ತು ಕಲಾವಿದೆ ಶ್ರೀಮತಿ ತಾರಾಮಲ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಮಹಿಳಾ ಉತ್ಸವದಲ್ಲಿ ಶ್ರೀಮತಿಯರಾದ ಜೆ. ಜಯ, ಲಲಿತಾ, ಟಿ. ರುಕ್ಮಿಣಿ, ಕ್ಷಮರಾವ್, ಲಲಿತ ಜಯಗೋಪಾಲ್, ಡಾ. ಜೆ. ಜೋಸೆಫಿನ್, ಡಾ. ವಿಜಯಾ ಶೇಷಾದ್ರಿ, ಡಾ. ವನಿತಾ ಕೆ. ಭಟ್, ಶೈಲ ಶ್ರೀ ಸುದರ್ಶನ, ರಮಾದೇವಿ, ಸರೋಜಿನಿ ಪಟ್ಟಾಭಿ, ಇಂದ್ರಾಣಿ ಸಿಂಗ್ ಇವರನ್ನು ಸನ್ಮಾನಿಸಲಾಯಿತು.

ಪ್ರೊ. ಬಿ. ಕೆ. ಚಂದ್ರಶೇಖರ್ ಅವರು ಕನ್ನಡ ಸಮ್ಮೇಳನವನ್ನು ದೀಪ ಬೆಳಗಿಸಿ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಬಾ. ಸಾಮಗ, ಗಣೇಶ ನ್ಯಾಕ್, ಆರ್. ವಿ. ಶಾಸ್ತ್ರಿ, ಡಾ. ಎಚ್. ವಿ. ಹಂದೆ, ಕೆ. ಶಾಮರಾವ್, ಡಾ. ಎಸ್. ರಾಮೆಗೌಡ, ಡಾ. ಎ. ಕಲಾನಿಧಿ ಅವರನ್ನು ಕಾಣಬಹುದು.

## OBITUARY

We have learnt with a deep sense of sorrow about the sad sudden demise of Sri M.R.K. Murthy on 11th Janaury, 2000

Sri M.R.K. Murthy was one of the senior most members, who belonged to the first generation of the members of the organization. He was actively involved in the growth and development of Association and had worked in various capacities over the years. With his passing away the Association has lost not only one of its ardent workers but also living link between the first generation of members & the present.

***

We learnt with deep sense of sorrow the sad demise of Smt. Venkatalakashamma Krishna Rao, wife of late Shri A.S.K. Rao, on 10th January, 2000

Shri A.S.K. Rao had been actively associated with the activities of the Association over along period. Smt. Venkatalakashamma was the silent supporter of her husband on his entire endeavor. A quiet, gentle and unassuming person by nature, she was extremely hospitable to the visitors at home.

We pray to the almighty to give courage to the family members to bear the loss.

Regn. No. 040015/86
Regn. No. MH/by/NE121/99
Date of Posting : 10-2-2000



# 51ನೇ ಗಣರಾಜ್ಯೋತ್ಸವ
# ಸುವರ್ಣ ಮಹೋತ್ಸವ ಸಂಭ್ರಮದಲ್ಲಿ
## ಭಾರತ ಗಣರಾಜ್ಯ - ನನಸಿನ ನೂರು ದಿನಗಳ ಸಂತಸದಲ್ಲಿ ಕರ್ನಾಟಕ

ನಮ್ಮ ಭಾರತದ ಪರಂಪರೆಯ ಉತ್ಕೃಷ್ಟತೆ ಮತ್ತು ಪ್ರಾಚೀನತೆಯ ಬಗ್ಗೆ ನಾವೆಂದಾದರೂ ಗಮನಹರಿಸಿದ್ದೇವೆಯೇ? 500 ವರ್ಷಗಳಿಗೂ ಹೆಚ್ಚು ಪುರಾತನವಾದ ನಮ್ಮ ಭವ್ಯ ಇತಿಹಾಸವನ್ನು ನಾವೆಂದಾದರೂ ಅವಲೋಕಿಸಿದ್ದೇವೆ? ಜಗತ್ತಿನ ನಾನಾ ಮೂಲೆಗಳಿಂದ ಬಂದ ಶ್ರೇಷ್ಠ ಹಾಗೂ ದಯಾಮಾಯ ವ್ಯಕ್ತಿಗಳಿಗೆ ಆಸರೆಯಿತ್ತು ಪೋಷಿಸಿ, ಮಾನವಕುಲಕ್ಕೆ ಅತ್ಯಂತ ಉದಾತ್ತ ಆದರ್ಶಗಳನ್ನು ನೀಡಿರುವ, ಸರ್ವಧರ್ಮ ಸಹಿಷ್ಣುತೆ ಹಾಗೂ ಭ್ರಾತೃತ್ವವನ್ನು ಅನುಸರಿಸಿ ಸಾರುತ್ತಿರುವ ಧರೆಯ ಈ ಅತ್ಯಂತ ಪವಿತ್ರ ಭಾಗ ಯಾವುದೆಂದು ಒಮ್ಮೆ ಯೋಚಿಸಿ ನೋಡಿ. ಅದುವೇ ನಮ್ಮ ಭಾರತ. ಈ ಮಹಾನ್ ರಾಷ್ಟ್ರದ ಪ್ರಜೆಗಳಾದ ನಾವು ಈ ಉದಾತ್ತ ತತ್ವಗಳಿಗೆ ಕಾಯಾ, ವಾಚಾ, ಮನಸಾ ಬದ್ಧರಾಗಿ ನಡೆದುಕೊಂಡಲ್ಲಿ ಅದೇ ನಮ್ಮ ದೇಶದ ಘನತೆಯನ್ನು ಎತ್ತಿ ಹಿಡಿಯುವ ಸಂಗತಿ. ಅದುವೇ ನಮ್ಮ ನೆಚ್ಚಿನ ತಾಯ್ನಾಡು 'ಭಾರತ ಗಣರಾಜ್ಯ'ದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಅರ್ಪಿಸಬಹುದಾದ ಬಹುದೊಡ್ಡ ಕೃತಜ್ಞತೆ.

ಕರ್ನಾಟಕ ಸರ್ಕಾರ ಶ್ರೀ ಎಸ್. ಎಂ. ಕೃಷ್ಣ ಅವರ ಕ್ರಿಯಾಶೀಲ, ದಕ್ಷ ಮತ್ತು ದೂರದೃಷ್ಟಿಯುತ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ 100 ದಿನಗಳ ಅತ್ಯಲ್ಪ ಅವಧಿಯಲ್ಲೆ ಕರ್ನಾಟಕದ ಜನತೆಯಲ್ಲಿ ಹೊಸತೊಂದು ಆಶಾಕಿರಣವನ್ನು ಮೂಡಿಸಿದೆ. ಹೊಸ ಸಹಸ್ರಮಾನದ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು ಆಧುನಿಕ ಜಗತ್ತಿನ ಅಭಿವೃದ್ಧಿಗೆ ಸ್ಪಂದಿಸಿ ಅದರೊಂದಿಗೆ ಮುನ್ನಡೆಯುವಂತವಾಗಲು ಸರ್ಕಾರ ಆದ್ಯತಾ ವಲಯಗಳನ್ನು ಗುರುತಿಸಿ ಅವುಗಳಿಗೆ ಸೂಕ್ತ ಪ್ರಾಧಾನ್ಯತೆ ನೀಡಿದೆ.

ಸರ್ಕಾರ ತನ್ನ ಧ್ಯೇಯೋದ್ದೇಶಗಳ ಸಾಧನೆಗಾಗಿ ರೂಪಿಸಿದ ಯೋಜನೆಗಳು

ವಿದ್ಯುಚ್ಛಕ್ತಿ : ● 52 ದುರ್ಗಮ ಹಳ್ಳಿಗಳ ವಿದ್ಯುದೀಕರಣ. ● 1600 ನೀರು ಸರಬರಾಜು ಯೋಜನೆಗಳ ಪೈಕಿ 809 ಯೋಜನೆಗಳಿಗೆ ವಿದ್ಯುದೀಕರಣ ಪೂರ್ಣ. ಉಳಿದ ಯೋಜನೆಗಳಿಗೆ ಮಾರ್ಚ್ 2000ದ ವೇಳೆಗೆ ವಿದ್ಯುತ್ ಸಂಪರ್ಕ. ● ಪ್ರತಿ ಜಿಲ್ಲೆಯಲ್ಲಿ ವಿದ್ಯುತ್ ಅದಾಲತ್. ಪರಿಕರಾಭಿವದ್ಧಿ : ● ರಸ್ತೆಗಳಿಗಾಗಿ ಕಾರ್ಯಾಚರಣೆ ಪಡೆ. ಆರೋಗ್ಯ : ● ಆರೋಗ್ಯ ಪರಿಪಾಲನೆಯ ಇಡೀ ವ್ಯವಸ್ಥೆಯನ್ನು ಪರಿವೀಕ್ಷಿಸಲು ಕಾರ್ಯಾಚರಣೆ ಪಡೆ ಸ್ಥಾಪನೆ. ● 573 ವೈದ್ಯರು ಮತ್ತು 115 ಸಹಾಯಕ ದಂತ ಶಸ್ತ್ರಚಿಕಿತ್ಸರ ನೇಮಕಾತಿ ಅಂತಿಮ ಹಂತದಲ್ಲಿ, ● ಶಿಕ್ಷಣ ರಂಗದಲ್ಲಿ ತಂದೆ ತಾಯಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಾಮಾನ್ಯ ಪ್ರಜೆಗಳ ಸಕ್ರಿಯ ಸಹಭಾಗಿತ್ವ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ : ಫೆಬ್ರವರಿ 2000ದಲ್ಲಿ ಗ್ರಾಮ ಪಂಚಾಯತಿಗೆ ಚುನಾವಣೆ. ● ಗ್ರಾಮ ಪಂಚಾಯತಿಗೆ ಅನುದಾನ ರೂ. 1 ಲಕ್ಷದಿಂದ ರೂ. 2 ಲಕ್ಷಗಳಿಗೆ ಏರಿಕೆ. ● ಗ್ರಾಮೀಣ ಸಂಪರ್ಕ ಜಾಲದ ಸುಧಾರಣೆಗಾಗಿ ಪ್ರತಿ ತಾಲ್ಲೂಕಿಗೂ ರೂ. 1 ಕೋಟಿ ಮಂಜೂರು. ವಸತಿ : ● ರಾಜೀವ್‌ಗಾಂಧಿ ಸಾಮಾಜಿಕ ವಸತಿ ನಿಗಮದ ಸ್ಥಾಪನೆ. ಪ್ರತಿವರ್ಷ 2 ಲಕ್ಷ ಮನೆಗಳ ನಿರ್ಮಾಣಕ್ಕೆ ಕ್ರಮ. ಕೃಷಿ : ಜಲಾನಯನ ಅಭಿವೃದ್ಧಿಗಾಗಿ ಪ್ರತ್ಯೇಕ ನಿರ್ದೇಶನಾಲಯ ಆರಂಭ. ● ಡಾ. ಎಂ. ಎಸ್. ಸ್ವಾಮಿನಾಥನ್ ಅವರ ಅಧ್ಯಕ್ಷತೆಯಲ್ಲಿ ಕೃಷಿನೀತಿ ಶೃಂಗ ಸಭೆ. ನೀರಾವರಿ : ● ನೀರು ಬಳಕೆದಾರರ ಸಹಕಾರ ಸಂಸ್ಥೆಯನ್ನು ಸ್ಥಾಪಿಸುವುದರ ಮೂಲಕ ನಾಲಾ ವ್ಯವಸ್ಥೆಯನ್ನು ಸಹಭಾಗಿತ್ವದ ಆಧಾರದ ಮೇಲೆ ಕೃಷಿಕರಿಗೆ ವಹಿಸಲಾಗುವುದು. ಮಾಹಿತಿ ತಂತ್ರಜ್ಞಾನ : 2005ರ ವೇಳೆಗೆ ಕರ್ನಾಟಕವನ್ನು ಜಗತ್ತಿನ ಮಾಹಿತಿ ತಂತ್ರಜ್ಞಾನದ ಆಗರವನ್ನಾಗಿ ಮಾಡಲು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿನ ಅವಕಾಶಗಳ ಕ್ರೋಢೀಕರಣ, ಕೈಗಾರಿಕೆ : ಹೊಸ ಕೈಗಾರಿಕಾ ನೀತಿ ಇಷ್ಟರಲ್ಲೇ ಪ್ರಕಟಣೆ. ● ಉದ್ದಿಮೆಗಳ ಸ್ಥಾಪನೆಗೆ ಕರ್ನಾಟಕ ಅತ್ಯಂತ ನೆಚ್ಚಿನ ತಾಣವನ್ನಾಗಿ ಅಭಿವೃದ್ಧಿಗೊಳಿಸುವುದು. ನಗರಾಭಿವೃದ್ಧಿ : ಬೆಂಗಳೂರು ಅಭಿವೃದ್ಧಿಗಾಗಿ ಕಾರ್ಯಾಚರಣೆ ಪಡೆ ಸ್ಥಾಪನೆ, ● ಡಿಸೆಂಬರ್ 2000 ವೇಳೆಗೆ 10,000 ನಿವೇಶನಗಳ ರಚನೆ. ಆಡಳಿತ ಯಂತ್ರ : ಜಿಲ್ಲೆಗಳ ಅಭಿವೃದ್ಧಿ ಪರಾಮರ್ಶೆ ಆರಂಭ. ● ಎಲ್ಲಾ ಜಿಲ್ಲೆಗಳಲ್ಲಿ ವೀಡಿಯೊ ಕಾನ್ಫರೆನ್ಸಿಂಗ್ ಸೌಲಭ್ಯ. ಈ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತಗೊಳಿಸುವ ದಿಸೆಯಲ್ಲಿ ಪ್ರಸಕ್ತ ಸರ್ಕಾರ ನಿರಂತರವಾಗಿ ದುಡಿಯುತ್ತಿದೆ. ● ಪ್ರತಿಯೊಂದು ಕ್ಷೇತ್ರದಲ್ಲಿ ಯಶಸ್ವಿಯಾಗುವ ಸಂಪೂರ್ಣ ವಿಶ್ವಾಸ ಸರ್ಕಾರಕ್ಕೆ.

ಕರ್ನಾಟಕ ಹೊಸ ಸಹಸ್ರಮಾನದಲ್ಲಿ ಹೊಸ ಸರ್ಕಾರ, ಅಭಿವೃದ್ಧಿಗೆ ಹೊಸ ಚೈತನ್ಯ.

**ಕರ್ನಾಟಕ ವಾರ್ತೆ.**

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38